
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಕ್ಟೋಬರ್ 2015
ಬೆಲೆ ರೂ. 1



## 26ನೇ ಸಂಪುಟ

ಸಂಘ ನಡೆಯುವ ಹಾದಿಯಲ್ಲಿ ಇನ್ನೊಂದು ಹೆಜ್ಜೆ...

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 1
ಅಕ್ಟೋಬರ್ 2015, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ


## ನೇರ ಮಾತು

ನದಿ ನೀರು ಹಂಚಿಕೆ ಕರ್ನಾಟಕದಲ್ಲಿ ಯಾವಾಗಲೂ ಚರ್ಚಿತ ವಿಷಯವೇ. ಕಾವೇರಿ, ಕೃಷ್ಣ, ಮಹದಾಯಿಯಂತಹ ಅಂತರ್ರಾಜ್ಯಗಳೊಳಗಿನ ವ್ಯಾಜ್ಯಗಳು ಸಾರ್ವಜನಿಕವಾಗಿ ಮಹತ್ವ ಪಡೆದು ಕೋರ್ಟ್ ಮೆಟ್ಟಲೇರಿದರೂ ಸಮಸ್ಯೆ ಪರಿಹಾರವಾಗುವುದು ಕಾಣುವುದಿಲ್ಲ. ಈ ವಿಷಯವನ್ನು ಭಾವನಾತ್ಮಕವಾಗಿ ಬಳಸಿಕೊಳ್ಳುವ ವಿವಿಧ ಶಕ್ತಿಗಳು ಸಮಸ್ಯೆ ಎಂದೂ ಪರಿಹಾರವಾಗದಂತೆ ನೋಡಿಕೊಳ್ಳುತ್ತವೆ.

ನೈಸರ್ಗಿಕ ಕಾರಣಗಳಿಂದಾಗಿ ರಾಜ್ಯದಲ್ಲಿ ಮಳೆಯ ಪ್ರಮಾಣ ಕೆಲವೊಮ್ಮೆ ಏರುಪೇರಾಗುತ್ತದೆ. ಹಾಗಾಗಿ ನದಿಗಳಲ್ಲಿ ಹರಿಯುವ ನೀರು ಕೆಲವೊಮ್ಮೆ ಪ್ರವಾಹವಾದರೆ ಕೆಲವೊಮ್ಮೆ ಪ್ರದೇಶವಿಡೀ ಬರಗಾಲಕ್ಕೆ ತುತ್ತಾಗುತ್ತದೆ. ಇಡೀ ರಾಜ್ಯದ ಪರಿಸ್ಥಿತಿಯನ್ನು ಅರ್ಥೈಸಿ ಅದಕ್ಕೊಂದು ಪರಿಹಾರವನ್ನು ಹುಡುಕುವ ಪ್ರಯತ್ನವಾಗಬೇಕಾಗಿದೆ.

ಈಗ ಎತ್ತಿನಹೊಳೆ ಯೋಜನೆಯೊಂದು ಹುಟ್ಟಿಕೊಂಡಿದ್ದು ಅದು ಚಿಕ್ಕಬಳ್ಳಾಪುರ, ಕೋಲಾರದ ಜನರಿಗೆ ಕುಡಿಯುವ ನೀರಿನ ಯೋಜನೆಯೆಂದು ಕಾರ್ಯ ಆರಂಭವಾಗಿದೆ. ಆದರೆ ನದಿಯ ಇನ್ನೊಂದು ಕಡೆಯ ಜನರು ಅದನ್ನು ನೇತ್ರಾವತಿ ನದಿ ತಿರುವು ಯೋಜನೆಯೆಂದುಕೊಂಡು ಹೋರಾಟಕ್ಕೆ ಇಳಿದಿದ್ದಾರೆ.

ಇಂತಹ ಸಮಸ್ಯೆಗಳು ಸಂದಿಗ್ದ ಸ್ಥಿತಿಯನ್ನು ತಲುಪಿ ರಾಜ್ಯದ ಒಗ್ಗಟ್ಟಿಗೆ ಹಾನಿಯಾಗುವ ಅಪಾಯವಿರುತ್ತದೆ.

ಹಾಗಾಗಿ ಇಡೀ ಕರ್ನಾಟಕದ ಐಕ್ಯತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ನಾವು ರಾಜ್ಯದೊಳಗೆ ಅಪಸ್ವರಗಳು ಏಳದಂತೆ ಜಾಗರೂಕರಾಗಬೇಕಾಗಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಕರ್ನಾಟಕದ ಜನತೆ ಸಾಬೀತು ಪಡಿಸಬೇಕಿದೆ.

ರಾಜ್ಯಕ್ಕೆ 'ಕಾವೇರಿ' ಎಂದೂ ಬಗೆ ಹರಿಯದ ಸಮಸ್ಯೆ, ರಾಜಕೀಯ ಬೇಳೆ ಬೇಯಿಸುವ ಈ ಸಮಸ್ಯೆಯ ಜೊತೆಗೆ ಕರ್ನಾಟಕದೆಲ್ಲೆಡೆ ಈಗ ನೀರಿನದೇ ಚರ್ಚೆ, ಹೋರಾಟ. ಮಹದಾಯಿ... ಕಳಸಾ ಬಂಡೂರಿ... ನೇತ್ರಾವತಿ ನದಿ ತಿರುವಿನ ಎತ್ತಿನ ಹೊಳೆ... ಹೀಗೆ ಬೇಕು... ಬೇಡಗಳ ಸ್ವರ, ಅಪಸ್ವರಗಳು ದಕ್ಷಿಣ ಕನ್ನಡದ ನೇತ್ರಾವತಿ ನದಿ ತಿರುವಿನ ಹೋರಾಟಕ್ಕೆ ಉತ್ತರ ಕರ್ನಾಟಕದವರ ಬೆಂಬಲವಿಲ್ಲ. ಕಳಸ ಬಂಡೂರಿ... ಮಹದಾಯಿ ಹೋರಾಟಕ್ಕೆ ದಕ್ಷಿಣ ಕನ್ನಡಿಗರ ಬೆಂಬಲವಿಲ್ಲ. ಉತ್ತರ ಕರ್ನಾಟಕದವರಿಗೆ ನೇತ್ರಾವತಿ ಸಮಸ್ಯೆಯಿಲ್ಲ. ಹಾಗೆಯೇ ದಕ್ಷಿಣ ಕರ್ನಾಟಕದವರಿಗೆ ಮಹಾದಾಯಿಯಾಗಲಿ, ಕಳಸ ಬಂಡೂರಿಯಾಗಲಿ ಸಮಸ್ಯೆಯಿಲ್ಲ. ಇದು ನಾವು ಕನ್ನಡಿಗರು ಸಮಸ್ಯೆಗಳಿಗೆ ಸ್ಪಂದಿಸುವ ರೀತಿ. ನಮ್ಮ ಮನೆಯ ಸಮಸ್ಯೆ ಮಾತ್ರ ನಮಗೆ ಸಮಸ್ಯೆಯಾಗಿ ಕಾಣುತ್ತದೆ. ಪಕ್ಕದ ಮನೆಯವರ ಸಮಸ್ಯೆ ನಮ್ಮದಲ್ಲವೇ? ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಕರ್ನಾಟಕದ ಜನತೆ ಅರಿತು ಕೊಳ್ಳುವುದಾದರೂ ಎಂದು? ತಮಿಳರಂತೆ 'ಕಾವೇರಿ' ಸಮಸ್ಯೆಯಲ್ಲಿ ಕರ್ನಾಟಕದ ಜನ ಒಗ್ಗಟ್ಟಾಗಿ ಹೋರಾಟ ನಡೆಸಿದ್ದರೆ ಬಹುಶಃ ಸಮಸ್ಯೆ ಎಂದೋ ಪರಿಹಾರವಾಗುತ್ತಿತ್ತು. ಹೆಚ್ಚೇಕೆ ಕರ್ನಾಟಕ ರಾಜಕಾರಣಿಗಳು ಒಗ್ಗಟ್ಟಾಗಿ ಕೇಂದ್ರ ಸರಕಾರದ ವಿರುದ್ಧ 'ಕಾವೇರಿ'ಯನ್ನು ಸಮರ್ಥಿಸಿಕೊಂಡು ರಾಜಕೀಯವಾಗಿ ಬಲವಂತದ ಬೇಡಿಕೆ ಇಡುವಲ್ಲಿ ಅಸಮರ್ಥರಾಗಿದ್ದಾರೆ.

ನಮ್ಮ ಶರೀರದ ಯಾವುದಾದರೂ ಒಂದು ಕಡೆ ನೋವಾದರೆ, ಗಾಯವಾದರೆ ಅದು ನಮಗೆ ನೋವಾದಂತೆ ಕರ್ನಾಟಕದ ಯಾವುದೇ ಭಾಗದಲ್ಲಿ ನಡೆಯುವ ಆಗು ಹೋಗುಗಳು ಅದು ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು ಎನ್ನುವುದನ್ನು ಅರಿತು ಇಂದು ಸ್ಪಂದಿಸುವ ಅಗತ್ಯತೆ ಇದೆ.

ಕರ್ನಾಟಕದ ಜನತೆ ಅಲ್ಲಲ್ಲಿ ಬೀದಿಗಿಳಿದು ನಿರಂತರವಾಗಿ ಹೋರಾಟ ಆರಂಭಿಸಿದ್ದಾರೆ. ಬಹುಶಃ ಈ ಹೋರಾಟದ ಅಗತ್ಯತೆ ಯಾಕೆ ಬಂತು ಎನ್ನುವುದನ್ನು ಅವಲೋಕನ ಮಾಡಬೇಕು. ಕರ್ನಾಟಕದಿಂದ ಕೇಂದ್ರಕ್ಕೆ ಚುನಾಯಿತರಾದ ಪ್ರತಿನಿಧಿಗಳು ಕೇಂದ್ರದಲ್ಲಿ ತೀವ್ರ ಹೋರಾಟ ಮಾಡುವ ಅತೀ ಅಗತ್ಯತೆ ಎದ್ದು ಕಾಣುತ್ತಿದೆ. ಇನ್ನೊಂದು ಅರ್ಥದಲ್ಲಿ ನಮ್ಮ ಪ್ರತಿನಿಧಿಗಳು ಸಂಪೂರ್ಣ ಅಸಮರ್ಥರು ಎನ್ನುವ... ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಅಕ್ಟೋಬರ್ ಅಭಿಮತದ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಸಂಘದ ಕಾರ್ಯಕಾರಿ ಸಮಿತಿಯ 2015–17ರ ಅವಧಿಗೆ ನೂತನ ಸಮಿತಿಗೆ ಚುನಾವಣೆ ಮುಗಿದು ಹೊಸ ಸಮಿತಿ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಎರಡು ವರ್ಷದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಇದು ತಮಗೆಲ್ಲ ಸಂತೋಷವನ್ನು ತಂದುಕೊಟ್ಟಿದೆ ಎಂದು ಭಾವಿಸಿದ್ದೇವೆ. ಮುಂಬರುವ ಸಮಿತಿ ಕೂಡ ಇನ್ನೂ ಹೆಚ್ಚಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಿ ಎಂದು ಆಶಿಸುತ್ತೇವೆ.

ಈ ಎರಡು ವರ್ಷಗಳಲ್ಲಿ ನಮಗೆ ಸಲಹೆ–ಸಹಕಾರ ನೀಡಿ ಸ್ಪಂದಿಸಿದ ತಮಗೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಮುಂಬರುವ ನೂತನ ಕಾರ್ಯಕಾರಿ ಸಮಿತಿಗೆ ಶುಭಾಶಯಗಳನ್ನು ಕೋರುತ್ತಿದ್ದೇನೆ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com
www.delhikarnatakasangha.com



# ದೆಹಲಿ ಕರ್ನಾಟಕ ಸಂಘದಲ್ಲಿ ಕಲಬುರ್ಗಿಯವರಿಗೆ ನುಡಿನಮನ

ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆಯಾಗಿ ನಾಲ್ಕು ದಿನವಾದರೂ ಅವರ ನೆರೆಹೊರೆಯವರ ವಿಚಾರಣೆ ನಡೆಸಲಾಗಿಲ್ಲ ಎಂಬ ವಿಷಯ ತಿಳಿದು ಆಘಾತವಾಗಿದೆ ಎಂದು ಸುಪ್ರಿಂ ಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಶರತ್ ಎಸ್. ಜವಳಿ ಅವರು ದೆಹಲಿ ಕರ್ನಾಟಕ ಸಂಘ ಸೆಪ್ಟೆಂಬರ್ 5ರಂದು ಆಯೋಜಿಸಿದ್ದ ಡಾ. ಎಂ.ಎಂ. ಕಲಬುರ್ಗಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು. ಕೆಲ ದಿನಗಳ ಹಿಂದೆ ಸಂಘ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇವರ ಮಾತು ನಮ್ಮ ಕಿವಿಯಲ್ಲಿನ್ನೂ ಪ್ರತಿಧ್ವನಿಸುತ್ತಿದೆ. ಅವರದು ಸಹಜ ಸಾವಾಗಿದ್ದಿದ್ದರೆ ಇಷ್ಟೊಂದು ನೋವಾಗುತಿರಲಿಲ್ಲ. ಇದು ಹತ್ಯೆ. ಈ ರಾಕ್ಷಸಿ ಕೃತ್ಯ ನಡೆಸಿದವರನ್ನು ಪೊಲೀಸರು ಈವರೆಗೂ ಹಿಡಿದಿಲ್ಲ ಎಂದು ತಮ್ಮ ವಿಷಾದ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ, ಕಲಬುರ್ಗಿಯವರ ಸಾವು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ ಎಂದು ಸಂತಾಪ ವ್ಯಕ್ತಪಡಿಸಿದರು ಅಲ್ಲದೆ ಈ ಸಭೆ ಇವರ ಹತ್ಯೆಯನ್ನು ತೀವ್ರವಾಗಿ ಖಂಡಿಸುತ್ತದೆ ಎಂಬ ನಿರ್ಣಯವನ್ನು ತೆಗೆದುಕೊಂಡಿತು. ನಂತರ ಮಾತನಾಡಿದ ಹೊಸದಿಗಂತ ಪತ್ರಿಕೆಯ ದೆಹಲಿ ವರದಿಗಾರ ವೃಷಾಂಕ ಭಟ್ ನಿವಣೆ, ಕಲಬುರ್ಗಿಯವರು ಎಡಪಂಥವೂ ಅಲ್ಲದ, ಬಲಪಂಥವೂ ಅಲ್ಲದ, ನೇರ ವಸ್ತುನಿಷ್ಠ ವ್ಯಕ್ತಿತ್ವವಾಗಿತ್ತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಲಬುರ್ಗಿಯವರ ಅಳಿಯ ಶ್ರೀ ಕಿಣಗಿ, ಸಂಘದ ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್, ಕಾರ್ಯದರ್ಶಿ ಸಿ.ಎಂ. ನಾಗರಾಜ, ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ, ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ದೆಹಲಿಯ ಕನ್ನಡಿಗರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**01 ನವೆಂಬರ್ 2015** ಭಾನುವಾರ ಬೆಳಿಗ್ಗೆ : 8.00 ಗಂಟೆಗೆ

ಕರ್ನಾಟಕ ರಾಜ್ಯೋತ್ಸವ : ಧ್ವಜಾರೋಹಣ

### ಸಂಘದ ಸಭಾಂಗಣದಲ್ಲಿ ನಾಟಕ

**18 ಅಕ್ಟೋಬರ್ 2015** ಭಾನುವಾರ ಸಂಜೆ : 6.30ಗಂಟೆಗೆ

ಕೆಂಪುಕೋಟೆ ತಂಡ ಪ್ರಸ್ತುತಪಡಿಸುವ
ಬಾಲಕೃಷ್ಣ ನಾಯ್ಕ್ ಡಿ. ವಿನ್ಯಾಸ ಮತ್ತು ನಿರ್ದೇಶನದ
ಸೊಫೋಕ್ಲಿಸ್‌ನ ಗ್ರೀಕ್ ದುರಂತ ನಾಟಕ **ಅಂತಿಗೊನೆ**

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಅಕ್ಟೋಬರ್, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಅಕ್ಟೋಬರ್, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಅಕ್ಟೋಬರ್, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಅಕ್ಟೋಬರ್, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**

# ದಿನಕರದ ರಕ್ತರಾತ್ರಿ





ದಿನಕರ ನಾಟಕ ತಂಡ ಶ್ರೀ ಶಿವಾನಂದ ಇಂಗಳೇಶ್ವರರವರ ನಿರ್ದೇಶನದಲ್ಲಿ 'ರಕ್ತರಾತ್ರಿ' ನಾಟಕವನ್ನು 13ನೇ ಸೆಪ್ಟಂಬರ್ 2015 ರಂದು ಸಂಜೆ ಆರು ಗಂಟೆಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರಸ್ತುತ ಪಡಿಸಿತು. ದಿವಗಂತ ಕಂದಗಲ್ ಹಣಮಂತರಾಯರು ಬರೆದ ಈ ನಾಟಕವನ್ನು ಆಯ್ದುಕೊಂಡು ಅದನ್ನು ದೆಹಲಿಯ ಕನ್ನಡದ ಕಲಾವಿದರೊಂದಿಗೆ ಒಡಗೂಡಿ ಅದನ್ನು ವಿಶಿಷ್ಟವಾಗಿ ಮತ್ತು ಸ್ಪಷ್ಟವಾಗಿ ಪ್ರಸ್ತುತ ಪಡಿಸಿದ್ದಕ್ಕೆ ಇಂಗಳೇಶ್ವರ ಹಾಗೊ ದಿನಕರ ತಂಡವನ್ನು ಅಭಿನಂದಿಸಬೇಕು. ಇನ್ನೂ ಮುಖ್ಯವಾಗಿ, ಕಂದಗಲ್ ಹಣಮಂತರಾಯರನ್ನು ಈ ನಾಟಕದ ಮೂಲಕ ದೆಹಲಿ ಕನ್ನಡಿಗರಿಗೆ ಪರಿಚಯಿಸಿದ್ದಕ್ಕೆ ದಿನಕರ ತಂಡದ ಈ ಪ್ರಯೊಗವನ್ನು ವಿಶಿಷ್ಟವೆಂದು ಕರೆಯಬೇಕು.

ಕರ್ನಾಟಕದ 'ಷೇಕ್ಸಪಿಯರ್' ಎಂದು ಹೆಸರಾದ ನಾಟ್ಯ ಕವಿ ಕೇಸರಿ ಕಂದಗಲ್ ಹಣಮಂತರಾಯರ ರಕ್ತರಾತ್ರಿ ನಾಟಕ ತುಂಬಾ ಪ್ರಸಿದ್ಧವಾದದ್ದು. 1930ರ ದಶಕದಲ್ಲಿ ರಚಿತವಾದ ಈ ನಾಟಕವನ್ನು ಈಗ ದೆಹಲಿಯ ರಂಗಮಂಚದಲ್ಲಿ ಆಡುವುದು ಸುಲಭವಾದ ಮಾತಲ್ಲ. ಈ ನಾಟಕದ ಉತ್ಕ್ರಷ್ಟವಾದ ಭಾಷಾ ಪ್ರಯೋಗವೇ ಕಲಾವಿದರಿಗೆ ಮತ್ತು ನಿರ್ದೆಶಕರಿಗೆ ದೊಡ್ಡ ಸವಾಲಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಅದನ್ನು ಈಗಿನ ನಾಟಕದ ಪ್ರೇಮಿಗಳಿಗೆ ಹದವಾಗಿ ಇಷ್ಟವಾಗುವಂತೆ, ಮೈ ನಿಮಿರಿಸುವಂತೆ ಉಣಬಡಿಸುವ ಕೆಲಸ ನಿರ್ದೇಶಕರಿಗೆ ಹಾಗೂ ಕಲಾವಿದರಿಗೆ ಪ್ರತಿ ಕ್ಷಣದಲ್ಲೂ ಅರಿವಾಗುವ ಮತ್ತು ಎದುರಾಗಿ ಸೆಡ್ಡು ಹೊಡೆಯುವ ನಾಟಕವಿದು. ನಿರ್ದೇಶಕ ಇಂಗಳೇಶ್ವರವರು ಹತ್ತಾರು ಭಾಗಗಳಿರುವ ಈ ಮಹಾನ್ ವಿಶಾಲ ನಾಟಕವನ್ನು ಒಂದೂವರೆ ಗಂಟೆಗಳಲ್ಲಿ ನಾಲ್ಕಾರು ಭಾಗಗಳಲ್ಲಿ ವಿಂಗಡಿಸಿ, ಎಲ್ಲೂ ಅದು ಜಾಳಾಗದಂತೆ ನೋಡಿಕೊಂಡು, ಪ್ರದರ್ಶಿಸಿದ್ದಾರೆ. ಇದು ಇಡೀ ರಾತ್ರಿ ಆಡುವ ವ್ಯವಸಾಯಿಕ ರಂಗಭೂಮಿಯ 1940ರ ದಶಕದ ಅತ್ಯಂತ ಪ್ರಸಿದ್ಧವಾದ ನಾಟಕವೆಂದರೆ ನಾನು ಮೇಲೆ ಹೇಳಿದ ಮಾತುಗಳ ಗಂಭೀರತೆಯ ಅರಿವಾಗುತ್ತದೆ.

ರಕ್ತರಾತ್ರಿ ನಾಟಕದ ಕಥಾವಸ್ತು ಕೂಡಾ ವಿಶಿಷ್ಟವಾದದ್ದು. ಕಂದಗಲ್ ಹಣಮಂತರಾಯರು ಇಡೀ ಮಹಾಭಾರತದ ಯಾವ ಪ್ರಮುಖ ಘಟ್ಟಗಳನ್ನು ನಾಟಕದ ವಸ್ತುಗಳನ್ನು ಮಾಡಿಕೊಳ್ಳದೆ, ಅದರ ಕೊನೆಯ ಮತ್ತು ಅಷ್ಟೆ ಭೀಷಣವಾದ ಒಂದು ರಾತ್ರಿಯ ಘಟನೆಯನ್ನೇ ಕಥಾವಸ್ತುವನ್ನಾಗಿ ಆರಿಸಿಕೊಂಡಿದ್ದು ಅವರ ಸೃಜನಶೀಲ ಮನಸ್ಸನ್ನು ನಮ್ಮ ಮುಂದೆ ತೆರೆದಿಡುತದೆ. ಅಶ್ವತ್ಥಾಮ ಇದರ ದುರಂತ ನಾಯಕ. ಆದರೆ ನಾಟಕದ ಹಾಗೂ ಈ ಘಟನಾವಳಿಗಳ ಸೂತ್ರದಾರ ಕೃಷ್ಣ. ನಾಟಕದ ಎಲ್ಲ ಫ್ರೇಮುಗಳಲ್ಲಿ ಆತನ ನೆರಳು. ಇದನ್ನು ನಿರ್ದೇಶಕ ಇಂಗಳೇಶ್ವರವರು ಚೆನ್ನಾಗಿ ಬಳಸಿಕೊಂಡಿದ್ದಾರೆ. ಕೃಷ್ಣ ನಾಟಕದ ಪ್ರತಿಯೊಂದು ಘಟನಾವಳಿಗಳನ್ನು ನಿಯಂತ್ರಿಸುತ್ತಾನೆ. ಅಶ್ವತ್ಥಾಮನಿಗೂ ಸೇಡಿನ ಕಿಚ್ಚು. ಈ ಸೇಡಿನ ಕಿಚ್ಚಿನ ದಳ್ಳುರಿ ಹೇಗೆ ಮಹಾಭಾರತ ಕಥಾನಕದ ಅಂತ್ಯದ ಅಂಕದಲ್ಲಿ ರೂಪಗೊಂಡ ಪರಿಯನ್ನು ಹಣಮಂತರಾಯರು ತಮ್ಮ ನಾಟಕದ ಶಬ್ದಜಾಲದಲ್ಲಿ, ಹಲವು ಬಗೆಯ ಮಾನಸಿಕ ಗೊಂದಲಗಳಲ್ಲಿ ಹಿಡಿದಿಡುತ್ತಾರೆ. ಈ ನಾಟಕದ ಸಾರವನ್ನು ಅರ್ಥಮಾಡಿಕೊಂಡು ಅದನ್ನು ತಮ್ಮದೆ ಆದ ವಿಶ್ಲೇಷಣೆಯ ಮೂಲಕ ನಿರ್ದೇಶಕ ಇಂಗಳೇಶ್ವರ ದೆಹಲಿಯ ಕನ್ನಡಿಗರ ಮುಂದಿಡಲು ಯಶಸ್ವಿಯಾಗಿದ್ದಾರೆ.

ವೈಶಂಪಾಯನ ಸರೋವರದಿಂದ ಎದ್ದು ಬಂದು ಭೀಮನನ್ನು ಎದುರಿಸುವ ದೃಶ್ಯದೊಂದಿಗೆ ಈ ನಾಟಕ ಪ್ರಾರಂಭವಾಗಿ, ಸುಯೋಧನ ತೊಡೆಗೆ ಏಟು ತಿಂದು ನೆಲಕಚ್ಚುವ ಕಾಲ ಈ ಮಹಾಭಾರತದ ಕೊನೆಯ ಅಂಕ. ಆಗ ರೋಷದಿಂದ ಬರುವ ಅಶ್ವತ್ಥಾಮ, ಸಾವಿಲ್ಲದ ಈ ಅಶ್ವತ್ಥಾಮ, ಪಾಂಡವರನ್ನು ಕೊನೆಗಾಣಿಸುವ ತನ್ನ ಆಶಯವನ್ನು ಸುಯೋಧನನಿಗೆ ಹೇಳಿ, ಅವನಿಂದ ಅಣತಿ ಪಡೆದು ಆ ಕರಾಳ ರಾತ್ರಿಯಲ್ಲಿ ಪಾಂಡವರ ಶಿಬಿರದತ್ತ ಗುಪ್ತವಾಗಿ ನಡೆದು, ಆ ಕರಾಳ ಕತ್ತಲ್ಲಲ್ಲಿ ಮಲಗಿದ್ದ ಉಪಪಾಂಡವರ ಶಿರಗಳನ್ನು, ಪಾಂಡವರ ಶಿರಗಳೆಂದು ಭ್ರಮಿಸಿ, ಕತ್ತರಿಸುವದರೊಂದಿಗೆ 'ರಕ್ತರಾತ್ರಿ'ಯ ಕರಾಳತೆಯ ಉಗಮವಾಗುತ್ತದೆ. ಆದರೆ ಈ ಎಲ್ಲವನ್ನೂ ಬಲ್ಲ ಕೃಷ್ಣನ ಲೀಲೆಯೆಂಬ ಅರಿವು ನಮಗಾಗುವಂತೆ ಕಂದಗಲ್ ಹಣಮಂತರಾಯರು ಕಥೆಯ ಹಂದರವನ್ನು ಹೊಸೆದಿದ್ದಾರೆ. ಅದನ್ನು ಅಷ್ಟೇ ಸಮರ್ಪಕವಾಗಿ ತಮ್ಮ ನಿರ್ದೇಶನದಲ್ಲಿ ಇಂಗಳೇಶ್ವರವರು ಬಳಸಿಕೊಂಡಿದ್ದಾರೆ. ಇದರಿಂದಾಗಿ, ಅದರಲ್ಲೂ ಈ ಲೀಲೆಯ ಪ್ರಸಂಗಗಳಿಂದಾಗಿ, ನಾಟಕಕ್ಕೆ ಒಂದು ಬಗೆಯ 'ಸರ್‍ರಿಯಲ್' ಭಾವವನ್ನು ಪಡಿಮೂಡಿಸಲು ನಿರ್ದೇಶಕ ಇಂಗಳೇಶ್ವರವರು ಯಶಸ್ವಿಯಾಗಿದ್ದಾರೆ. ಈ ಬಗೆಯ ಭಾವವನ್ನು ಕೃಷ್ಣನ ಪಾತ್ರದಲ್ಲಿ ನಾರಾಯಣರವರು ತಮ್ಮ ಗಂಭೀರ ಹಾಗೊ ಸಂಯಮಶೀಲ ಅಭಿನಯದಲ್ಲಿ ಅತ್ಯುತ್ತಮವಾಗಿ ಮೆರೆದಿದ್ದಾರೆ.

ಈ 'ಸರ್‍ರಿಯಲ್' ಭಾವವನ್ನು ನಿರ್ದೇಶಕರು ರಂಗಮಂಚವನ್ನು ಹಾಗೂ ಅದರ ಸುತ್ತಮುತ್ತಲಿನ ಪರಿಕರಗಳನ್ನೂ ರೂಪಿಸುವಲ್ಲೂ ಬಳಸಿಕೊಂಡಿದ್ದಾರೆ. ರಂಗಮಂಚದ ಎರಡೂ ಕಡೆ ಇಳಿಸಿದ ಕೇಸರಿ ಬಣ್ಣದ ಮಿಶ್ರಿತ ಉದ್ದನೆಯ ನಿಲುವಂಗಿಯಂತಹ ಪರದೆಗಳು ನಾಟಕದ ಮೂಲ ಕಥಾವಸ್ತುವನ್ನು ಪ್ರತಿಬಿಂಬಿಸುವಂತಿವೆ. ಇದರಿಂದಾಗಿ ನಾಟಕ ನೋಡಲು ಬಂದವರಿಗೆ ದೆಹಲಿ ಕರ್ನಾಟಕ ಸಂಘದ ಎಂದಿನ ರಂಗಮಂಚ ಕಾಣದೆ ಯಾವುದೋ ಇನ್ನೊಂದು ಬಗೆಯ, ಇನ್ನೊಂದು ಲೋಕದ ರಂಗಸ್ಥಳ ಕಾಣುವಂತೆ ತೋರುತ್ತದೆ. ನನಗಂತೂ ಹಾಗನಿಸಿತು. ರಂಗಮಂಚದ ಮೇಲೆ ನಡೆಯುವ ಘಟನಾವಳಿಗಳಿಗೆ ಪೂರಕವಾಗಿ ಈ ಬಣ್ಣದ ಪರದೆಗಳು ರಕ್ತರಾತ್ರಿಯ ಭಾವಗಳನ್ನು ಕಲಾವಿದರ ಮಾತಿನ ಸಂಗಡ ಹಿಡಿದಿಡುವಂತೆ ತೋರುತ್ತಿತ್ತು. ನಿರ್ದೇಶಕ ಇಂಗಳೇಶ್ವರರ ಜೊತೆ ಮುಖ್ಯವಾಗಿ ರಂಗವಿನ್ಯಾಸ ಮಾಡಿದ ಸುಧೀರ್ ಫಡ್ನೀಸ್ ಹಾಗೂ ಯೋಗೇಂದ್ರ ಸಿಂಗ್ ಅವರನ್ನು ಅಭಿನಂದಿಸಲೇ ಬೇಕು.

ನಾಟಕ ಪ್ರಾರಂಭವಾದ ರೀತಿಯೂ ಅನನ್ಯವಾಗಿತ್ತು. ದಿನಕರ ತಂಡದ ನಾಟಕಗಳ ತಾಲೀಮಿನಲ್ಲಿ ಪಾಲ್ಗೊಂಡ ಕಲಾವಿದರೆಲ್ಲರ ಕೊಲ್ಲಾಜ್‌ಗಳನ್ನು ಪರದೆಯ ಮೇಲೆ ಸಂಗೀತದ ಹಾಗೂ ಹಾಡಿನ ಹಿನ್ನೆಲೆಯಲ್ಲಿ ಮೂಡಿಸುವುದರೊಂದಿಗೆ ನಾಟಕ ಪ್ರಾರಂಭವಾಯಿತು. ಈ ಬಗೆ ಹಲವು ಸಾಧ್ಯತೆಗಳಿಗೆ ನಾಂದಿಯಾಗುತ್ತದೆ. ಮುಖ್ಯವಾಗಿ, ನಾಟಕದ ಕಲಾವಿದರೆಲ್ಲರನ್ನೂ ನಾಟಕ ನೋಡಲು ಬಂದವರಿಗೆಲ್ಲ ದೊಡ್ಡ ಫ್ರೇಮಿನಲ್ಲಿ ತೋರಿಸಿದಂತಾಯಿತು. ಎರಡನೇಯದಾಗಿ, ದಿನಕರ ತಂಡದ ಇತರ ನಾಟಕಗಳ ಚಟುವಟಿಕೆಗಳನ್ನು ಬಂದವರಿಗೆ ಪರಿಚಯಿಸಿದಂತಾಯಿತು. ನಾಟಕ ನಿಧಾನವಾಗಿ ಬಂದ ಜನರ ಮನದಾಳದಲ್ಲಿ

## Raktha Rathri (A Play in Kannada)

Kannada Theatre is popular on the national scene with a host of their plays in the National Capital almost regularly. The Delhi Kannada theatre group, DINAKARA, presented Raktha Rathri showing a couple of episodes from the MahaBharata on 20-Sep-2015 in Delhi Karnataka Sangha auditorium.

The play Raktha Rathri si being shown regularly at some places or other in Karnataka for the last 5 years speaks volumes about the playwright, Late Kandagal Hanumantha Rao who is known as 'Shakespeare of Karnataka'.

The action packed script was brought to life in action with the team of talented local artists among whom B Narayana as Krishna deserves a special mention. The restraint with which he performed throughout is appropriate to the role he played. Ms. Asalatha Mahadev as Draupadi was good. She showed shades of a breaved mother and a ferociously revengeful woman and spoke her lines with alacrity.

A commendable performance with all the artists justifying their roles under the able direction of Shivanand S Ingleshwar

***N S Kameswara Rao***

Hony Advisor, Dakshina Bharata Natee-Nata Samakhaya, New Delhi




ಇಳಿಯುವಂತಾಯಿತು. ಅದು ಮುಗಿಯುತ್ತಿದ್ದ ಹಾಗೆಯೆ ನಾಟಕ ನಿಧಾನವಾಗಿ ಸುಯೋಧನ ವೈಶಂಪಾಯನ ಸರೋವರದಲ್ಲಿ ಕುಳಿತಿದ್ದವನು ಭೀಮನ ಕರೆಯನ್ನು ಕೇಳಿ ಎದ್ದು ಬಂದು ಹೋರಾಟ ಮಾಡಿ ಕೃಷ್ಣನ ಕರಮತ್ತಿನಿಂದಾಗಿ ಕಾಲುಮುರಿದು ಕುಳಿತುಕೊಳ್ಳುವುದರೊಂದಿಗೆ ನಾಟಕದ ಮೊದಲ ದೃಶ್ಯ ಪ್ರಾರಂಭವಾಗುತ್ತದೆ.

ನಂತರದಲ್ಲಿ ನಾಟಕ ನಾಲ್ಕಾರು ಘಟನಾವಳಿಗಳಲ್ಲಿ ಮುಂದುವರಿಯತ್ತದೆ. ಕಂದಗಲ್ ಹಣಮಂತರಾಯರ ಮಹಾನಾಟಕವನ್ನು ನಾವೆಲ್ಲ ಮುಷ್ಟಿಯಲ್ಲಿ ಇರಿಸಿಕೊಂಡು ಸಂತೋಷ ಪಡುವಂತೆ ನಿರ್ದೇಶಕ ಇಂಗಳೇಶ್ವರ ನಮಗೆ ಅದರ ಸ್ವಾದವನ್ನು ಉಣಬಡಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಧಾರಳವಾಗಿ ಹೇಳಬಹುದು. ಹಾಗೆಯೆ ನಾಟಕದ ನಟರೆಲ್ಲರ ಸತ್ವವನ್ನು ಸಹ ಎಲ್ಲೂ ಜಾಳಾಗಂತೆ ನೋಡಿಕೊಂಡು, ಅವರೆಲ್ಲರ ನಟನೆಯ ಪರಿ ಎಲ್ಲೂ ಒಂದು ಬಗೆಯ ಕೃತ್ರಿಮತೆಯ ಎಲ್ಲೆಯನ್ನು ಮೀರಿ ಹೋಗದಂತೆ ನೋಡಿಕೊಂಡಿದ್ದಾರೆ. ಅಶ್ವತ್ಥಾಮ ಪಾತ್ರದಲ್ಲಿ ಶಶಿಧರ ಮುನವಳ್ಳಿಯವರು ತಮ್ಮ ಎಲ್ಲ ನಟನಾ ಕೌಶಲವನ್ನು ಅಸ್ಥೆಯಿಂದ ನೀಡಿದ್ದಾರೆ. ಅಶ್ವತ್ಥಾಮನ ತಳಮಳ, ಆಕ್ರೋಶ, ರೋಷ ಹಾಗೂ ಒಂದು ಬಗೆಯ ಹತಾಶೆಯ ಭಾವನೆಗಳನ್ನು ಹದವಾಗಿ ತೋರಿದ್ದಾರೆ. ಎಲ್ಲೂ ಗಡಿಬಿಡಿಯಿಲ್ಲ. ಸ್ಪಷ್ಟವಾದ ಸಂವಾದಗಳನ್ನು, ಅಷ್ಟೇ ಸ್ಪಷ್ಟವಾಗಿ ಹೇಳುವ ಅವರ ಬಗೆಯನ್ನು ಮೆಚ್ಚಬೇಕು.

ಹಾಗೇಯೆ ದ್ರೌಪದಿಯ ಪಾತ್ರದಲ್ಲಿ ಆಶಾ ಮಹಾದೇವರವರು ಅದ್ಭುತವಾದ ತಮ್ಮ ನಟನಾ ಕೌಶಲವನ್ನು ಮೆರೆದಿದ್ದಾರೆ. ಎಲ್ಲ ಬಗೆಯ ಇಮೋಶನಲ್ ವಿವರಗಳನ್ನು ಅವರು ತಮ್ಮ ಪಾತ್ರದಲ್ಲಿ ವಿಶಿಷ್ಟವಾಗಿ ತೋರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಇಡೀ ನಾಟಕದ ಬಂಧ ಈ ಎರಡು ಪಾತ್ರಗಳಲ್ಲಿತ್ತು ಎಂದರೆ ಅತಿಶಯೋಕ್ತಿಯಾಗಲಾರದು ಎಂದುಕೊಳ್ಳುತ್ತೇನೆ. ಭೀಮನಾಗಿ ಎ.ಟಿ. ಶ್ರೀನಿವಾಸ, ಸುಯೋಧನನಾಗಿ ಗಿರೀಶ, ಧರ್ಮರಾಯನಾಗಿ ರಾಜಕುಮಾರ, ಅರ್ಜುನನಾಗಿ ಆರ್. ಮಹಾದೇವ, ಶಂಕದತ್ತನಾಗಿ ಕೃಷ್ಣರಾಜ್ ನೆಲ್ಲಿ, ದುರ್ಜಯನಾಗಿ ಕುಮಾರ ರಿತ್ವಿಕ್ ನೆಲ್ಲಿ, ಭಾನುಮತಿಯಾಗಿ ಸವಿತಾ ನೆಲ್ಲಿ, ನವಲಿಪಕ್ಕನಾಗಿ ಶಿವಪ್ಪ, ಮದಹಂಸಿಯಾಗಿ ವಿದ್ಯಾ ಭಟ್ ಮತ್ತು ಉತ್ತರೆಯಾಗಿ ಶಿಲ್ಪ ಹರಿಪ್ರಿಯ ಈ ಎಲ್ಲರೂ ಅದ್ಭುತವಾದ ಹಾಗೂ ಸಂಯಮದ ತಮ್ಮ ನಟನಾ ಕೌಶಲ್ಯವನ್ನು ಮೆರೆದಿದ್ದಾರೆ. ಕನ್ನಡದ ಕ್ಲಿಷ್ಟ ಶಬ್ದಗಳನ್ನೂ ಸಹ ತಮ್ಮ ಸಂವಾದಗಳಲ್ಲಿ ತುಂಬ ಸಹಜವಾಗಿ ಮೂಡಿಸಲು ಯಶಸ್ವಿಯಾಗಿದ್ದಾರೆ.

ಸಂತೋಷ ಕುಮಾರ ಉಪಾಧ್ಯಾಯ ಮತ್ತು ಎಸ್. ಕುಮಾರ್ ಅವರ ಸಂಗೀತ ಹಿತಮಿತವಾಗಿತ್ತು ಮತ್ತು ಸಂದರ್ಭಕ್ಕೆ ಸರಿಯಾದ ಸಂಗೀತದ ಹೊನೆಲು ಹಾಗೂ ಹಾಡುಗಳು ಹರಿದಿದ್ದು ಎಲ್ಲರ ಮನ ನಾಟಕದ ವಿವಿಧ ಸ್ವರೂಪಗಳಲ್ಲಿ ತೊಡಗಿಕೊಳ್ಳುವಂತಾಯಿತು ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು. ಸಂಗೀತ ಹಾಗೂ ಹಾಡು ನಾಟಕದ ವಿವಿಧ ರಸಗಳನ್ನು ಸಂಭಾಷಣೆಗಳೊಂದಿಗೆ ಹಿಡಿದಿಡುವ ಪರಿ ನಾಟಕಕ್ಕೆ ಹೊಸ ಆಯಾಮವನ್ನು ನೀಡುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳುವ ಪ್ರಯತ್ನ ಈ ನಾಟಕದಲ್ಲಿದೆ ಮತ್ತು ಈ ಎಲ್ಲ ಕಲಾವಿದರು (ನಿರ್ದೇಶಕರು ಸಹ) ರಂಗಮಂಚದ ಅಂಚಿನ ಮೆಟ್ಟಿಲುಗಳ ಬಳಿ ತಮ್ಮ ಎಲ್ಲ ಆಶಯಗೊಳೊಂದಿಗೆ ಕುಳಿತ ಬಗೆ ಅವರಲ್ಲಿನ ನಾಟಕದ ಕುರಿತಾದ ಗಂಭೀರ ಪ್ರೀತಿ ಮತ್ತು ಕಳಕಳಿಯನ್ನು ತೋರುತ್ತದೆ. ಈ ಹಾಡಿನ ಜಾಡಿನಲ್ಲಿ ಸೇರಿಕೊಂಡ ಎಲ್ಲ ಕಲಾವಿದರನ್ನೂ ಅಭಿನಂದಿಸಲೇ ಬೇಕು.

ದೆಹಲಿ ನಾಟಕಗಳಲ್ಲಿ ಚಿರಪರಿಚಿತರಾದ ಪ್ರಸಾಧನ ಕಲಾವಿದ ಶಶಿಕಾಂತ ಪಾಟೀಲರ ಎಂದಿನ ಕಲಾವಂತಿಕೆಗೆ 'ಉಘೆ ಉಘೆ'. ಯೋಗೇಂದ್ರ ಸಿಂಗ್‌ರ ಬೆಳಕು ಅಷ್ಟೇ ಹಿತಮಿತವಾಗಿತ್ತು. ಒಟ್ಟಾರೆ ನಾಟಕ 'ರಕ್ತರಾತ್ರಿ' ತನ್ನ ಎಲ್ಲ 'ಲಿಮಿಟೇಶನ್'ಗಳಲ್ಲೂ ಒಂದು ಅದ್ಭುತವಾದ ಅನುಭವ ಕೊಡುವ ಹಾಗೂ ಒಂದು ಕಾಲಘಟ್ಟದಲ್ಲಿ ವ್ಯವಸಾಯಿಕ ನಾಟಕ ರಂಗದ ಧ್ರುವ ತಾರೆಯಾಗಿದ್ದ ಕಂದಗಲ್ ಹಣಮಂತರಾಯರನ್ನು ಪರಿಚಯಿಸುವ ದೃಷ್ಟಿಯಿಂದ ದೆಹಲಿ ಕನ್ನಡಿಗರಿಗೆ ನೀಡಿದ ರಸದೌತಣವೆಂದೆನ್ನಬೇಕು. ಈ ಎಲ್ಲ ಕನ್ನಡಿಗರನ್ನು ಒಟ್ಟು ಸೇರಿಸಿ ನಾಟಕವೊಂದನ್ನು ದೆಹಲಿಯಂತಹ ಜಾಗೆಯಲ್ಲಿ ಮಾಡುವುದೇ ಒಂದು ಸಾಹಸವಾಗಿರುವಾಗ, ಈ ಸಾಹಸಕ್ಕೆ ಬಾರಿಬಾರಿ 'ದಿನಕರ'ದ ಮೂಲಕ ಕೈಹಾಕುವ ಇಂಗಳೇಶ್ವರವರಿಗೆ ಹಾಗೂ ಎಲ್ಲ ಕಲಾವಿದರಿಗೆ ದೊಡ್ಡ 'ಪರಾಕು'.

ಮಾತು ಮುಗಿಸುವ ಮುನ್ನ ಎರಡು ವಿಚಾರಗಳು. ದೆಹಲಿಯಲ್ಲಿ ಯಾರ ಹಂಗು ಇಲ್ಲದವರಂತೆ ನಾಟಕದ ಹುಚ್ಚನ್ನು ಬೆಂಬತ್ತಿ (ಅಂತವರು ಇನ್ನೂ ದೆಹಲಿಯಲ್ಲಿ ಒಬ್ಬಿಬ್ಬರಿದ್ದಾರೆ ಮತ್ತು ಅದು ನಮಗೆಲ್ಲ ಸಂತಸದ ಸಂಗತಿ) ತಮ್ಮ 'ದಿನಕರ'ದ ಮೂಲಕ ಆಸಕ್ತ ದೆಹಲಿ ಕನ್ನಡಿಗರನ್ನು ಒಟ್ಟುಗೂಡಿಸಿ, ನಾಟಕವನ್ನು ಆಡುವ, ನಾಟಕದ ಮೂಲಕ ತಮ್ಮನ್ನು ಗುರುತಿಸಿಕೊಳ್ಳುವ ನಿರಂತರ ಪ್ರಯತ್ನದಲ್ಲಿದ್ದಾರೆ. ದೆಹಲಿಯಂತಹ ಜಾಗೆಯಲ್ಲಿ ನಾಟಕ ಆಡುವ ಪ್ರಕ್ರಿಯೆಯೇ ತುಂಬಾ ಜಟಿಲವಾದದ್ದು. ದಿನಾ ಒಂದೆಡೆ, ತಮ್ಮೆಲ್ಲ ಈ ಮಹಾನಗರದ ಹಲವಾರು ಕೆಲಸಗಳ ಜಂಜಡಗಳ ನಡುವೆ, ಹತ್ತಾರು ಜನ ಸೇರಬೇಕು, ದೆಹಲಿಯಲ್ಲಿ ಒಂದು ಕಡೆಯಿಂದ ಇನ್ನೊಂದೆಡೆ ಬಂದು ಹೋಗುವುದೇ ಒಂದು ಮಹಾಪ್ರಯಾಸದ ಕೆಲಸವಾದರೆ, ನಾಟಕದ ಸಂವಾದಗಳನ್ನು ಮನದೊಳಕ್ಕೆ ಇಳಿಯುವಂತೆ ನೋಡಿಕೊಳ್ಳುವುದು... ಮನೆಯ ಕಡೆಯ ಕೆಲಸದ ಒತ್ತಾಸೆಗಳು...ಈ ಎಲ್ಲ ಸಂಕೀರ್ಣತೆಗಳ ನಡುವೆಯೂ ಕನ್ನಡದ ನಾಟಕದ ಕಂಪನ್ನು ಅತ್ಯಂತ ಗಂಭೀರವಾಗಿ ದೆಹಲಿ ಕನ್ನಡಿಗರಿಗೆ ಬೀರಲು ಮಾಡುವ ಈ ಪ್ರಯತ್ನವೇ ಶ್ಲಾಘನೀಯವಾದದ್ದು.

ಇನ್ನೊಂದು ವಿಚಾರವೆಂದರೆ, ಗುಳೆದಗುಡ್ಡದ ಕನ್ನಡದ 'ಷೇಕ್ಸಪಿಯರ್' ಎಂದು ಹೆಸರಾದ 1930ರ ದಶಕದ ಕಂದಗಲ್ ಹಣಮಂತರಾಯ ರನ್ನು ಕನ್ನಡಿಗರಿಗೆ ಈ ನಾಟಕದ ಮೂಲಕ ಪರಿಚಯಿಸುವ ಪ್ರಯತ್ನವೂ ಸಹ ಶ್ಲಾಘನೀಯ ವಾದದ್ದು. ಹಣಮಂತರಾಯರ ಬದುಕೆ ನಾಟಕಕ್ಕೆ ಮೀಸಲಾದದ್ದು. ಅತ್ಯಂತ ಸ್ಥಿತಿವಂತರಾಗಿದ್ದ ಕಂದಗಲ್‌ರವರು ಪುಣೆಯಲ್ಲಿ ಒಳ್ಳೆ ಸರಕಾರಿ ನೌಕರಿಯಲ್ಲಿದ್ದವರು, ಎಲ್ಲವನ್ನೂ ತೊರೆದು ಕರ್ನಾಟಕದತ್ತ ಬಂದು ಸುಮಾರು 36 ಅದ್ಭುತವಾದ ನಾಟಕಗಳನ್ನು ಬರೆದು (ಅದರಲ್ಲಿ 'ಬಡತನದ ಭೂತ' ಮತ್ತು 'ಸಂಧ್ಯಾರಾಗ' ನಾಟಕಗಳು ತುಂಬಾ ಪ್ರಸಿದ್ಧ ಹಾಗೂ ನೂರಾರು ಜನಭರಿತ ಪ್ರದರ್ಶನಗಳನ್ನು ಕಂಡವು) ತಮ್ಮದೇ ನಾಟಕ ಕಂಪನಿಯನ್ನು ಕಟ್ಟಿ ನಾಟಕವನ್ನು ಆಡಿದವರು.

ಸುಮಾರು ನಾಲ್ಕಾರು ದಶಕಗಳ ಕಾಲ ಉತ್ತರ ಕರ್ನಾಟಕದಲ್ಲಿ ನಾಟಕ ಕೇಸರಿಯಾಗಿ ಮೆರೆದ ಕಂದಗಲ್‌ರವರು 13 ನೇ ಸೆಪ್ಟಂಬರ 1966ರಲ್ಲಿ ತೀರಿಕೊಂಡಾಗ ಅವರ ಬಳಿ ಇದ್ದದ್ದು ಅವರ ನಾಟಕಗಳ ಹಿರಿಮೆ, ಅವರು ಗುರುತಿಸಿ ಮೇಲೆ ತಂದ ಕಲಾವಿದರ ಬಳಗ, ಹಾಗೂ ಅವರ ಬೆಲ್ಲದ ಚಹ ಮತ್ತು ಬೀಡಿ. ನಂತರದ ಉತರ ಕರ್ನಾಟಕದ ನಾಟಕ ಪ್ರಪಂಚದ ದಿಗ್ಗಜರುಗೆಳಾದ ಶ್ರೀ ಏಣಗಿ ಬಾಳಪ್ಪನವರ ಇನ್ನೂ ಹಲವರು ಅವರ ನಾಟಕದ ಕಂಪನಿಯಿಂದ ಹೊರಹೊಮ್ಮಿದವರು. ಅತ್ತ ಕನ್ನಡ ನಾಟಕ ಲೋಕದ ದಕ್ಷಿಣದಲ್ಲಿ 'ಗುಬ್ಬಿ ವೀರಣ್ಣ'ನವರಿದ್ದರೆ, ಇತ್ತ ಉತ್ತರದಲ್ಲಿ 'ಕಂದಗಲ್ ಹಣಮಂತರಾಯರು'. ಈ ನಾಟಕ ಪ್ರಪಂಚದ ದಿಗ್ಗಜರುಗಳನ್ನು ದೆಹಲಿ ಕನ್ನಡಿಗರಿಗೆ ಮರುನೆನಪು ಮಾಡಿಕೊಟ್ಟ ದಿನಕರಕ್ಕೆ, ಇಂಗಳೇಶ್ವರರವರಿಗೆ, ಕಲಾವಿದರಿಗೆ, ದೆಹಲಿ ಕರ್ನಾಟಕ ಸಂಘದ ಎಲ್ಲರಿಗೆ ಅಭಿನಂದನೆಗಳು.

ಕೊನೆಯಲ್ಲಿ ನಮೂದಿಸಬೇಕಾದ ಮಾತು–ಈ ನಾಟಕವನ್ನು ಕಂದಗಲ್ ಹಣಮಂತರಾಯರ ಜಯಂತಿಯ ದಿನವೆ, ಅಂದರೆ 13ನೇ ಸೆಪ್ಟಂಬರ್‌ನಂದು ಆಡಿದ್ದು, ಮತ್ತು ಅವರ ಜಯಂತಿಯ 50ನೇಯ ವರ್ಷದ ಹೊಸ್ತಿಲಲ್ಲಿ ಈ ನಾಟಕವನ್ನು ಆಡಿದ್ದು ತುಂಬಾ ಪ್ರಸ್ತುತ ಹಾಗೂ ಸಮಯೋಚಿತ. ಅ

***ಡಾ. ವೆಂಕಟಾಚಲ ಹೆಗಡೆ***



# ಸಂಘದಲ್ಲಿ ತಿಂಗಳ ನಾಟಕ ಮಧುರ ಮಿಲನ

ದೆಹಲಿ ಕರ್ನಾಟಕ ಸಂಘವು ನಡೆಸುವ ತಿಂಗಳಿಗೊಂದು ನಾಟಕದ ಐದನೇ ಪ್ರಯೋಗ ಸೆಪ್ಟೆಂಬರ್ 4, 2015ರಂದು ಸವಿತಾ ಇನಾಮದಾರ್ ಅವರ ರಚನೆ ಮತ್ತು ನಿರ್ದೇಶನದ "ಮಧುರ ಮಿಲನ" ಸಾಮಾಜಿಕ ನಾಟಕವನ್ನು ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರು ಸಂಘದ ಸಭಾಂಗಣದಲ್ಲಿ ಪ್ರಸ್ತುತಪಡಿಸಿದರು.

ಅದೆಷ್ಟೋ ಬಾರಿ ಹೃದಯದ ಮಾತುಗಳು ಅಧರದಿಂದ ಹೊರಬಾರದೇ ಜೀವನ ಪರ್ಯಂತ ನೋವು ಅನುಭವಿಸಬೇಕಾಗುತ್ತದೆ. ಮನ ಮೆಚ್ಚಿದವನ ಮನದನ್ನೆಯಾಗಲು ಅದೃಷ್ಟವೂ ಬೇಕಲ್ಲವೇ? ಜೀವನದಲ್ಲಿ ಯಾವಾಗ ಏನು ಸಂಭವಿಸುತ್ತದೆ ಅನ್ನುವುದು ಯಾರಿಗೂ ಗೊತ್ತಾಗದು. ನೊಂದ ಹೆಣ್ಣಿನ ಬಾಳು ಬಂಗಾರವಾಗಬಹುದೆ? ವರುಣನ ಸಿಂಚನದಿಂದ ಒಣಗಿದ ಗರಿಕೆ ಮತ್ತೆ ಚಿಗುರಿದಂತೆ ಕಳೆದು ಹೋದ ಪ್ರೀತಿ ಮತ್ತೆ ಮರುಕಳಿಸಿದರೆ? ಆಗ ಪುನರ್ಮಿಲನವಾಗಬಹುದೆ? ವಿರಹಿಗಳ ಹೃದಯ ವೀಣೆ ಪುನಃ ಝೇಂಕರಿಸುವುದೆ? ಪ್ರೇಮ ಕಾನನದಲ್ಲಿ ಕೋಗಿಲೆ ಮತ್ತೊಮ್ಮೆ ಹಾಡಬಲ್ಲದೇ? ನಾವಿರುವ ಈ ಸಮಾಜದಲ್ಲಿ ಇದು ಸಾಧ್ಯವೇ? ಸಾಧ್ಯವೇ? ಖಂಡಿತ ಸಾಧ್ಯ. ನಿಷ್ಕಾಮ ಪ್ರೀತಿಯಾಗಿದ್ದರೆ ಆಗ ಆ ದೇವರೂ ಸಹ ನಿಮಗೆ ಸಹಾಯ ಮಾಡುವನು. ನಿಮ್ಮವರು ನಿಮ್ಮ ಮನಸ್ಸನ್ನು ಅರ್ಥಮಾಡಿಕೊಂಡರೆ ಇದು ಖಂಡಿತ ಸಾಧ್ಯ... ಮತ್ತೊಮ್ಮೆ ನಿಮ್ಮ ಪ್ರೇಮದವಲ್ಲರಿಯಲ್ಲಿ ಹೂವರಳುವುದು. ಎಲ್ಲೆಡೆಗೂ ಕಂಪು ಬೀರುವುದು. ಒಂಟಿತನ ನೀಗುವುದು. ಹೊಸ ಬಾಳಿನ ಪಯಣ ಆರಂಭವಾಗುವುದು. ಅ

**ಅಭಿಮತ ವರದಿ**







# ಕನ್ನಡ ಚಲನ ಚಿತ್ರಗೀತೆಗಳ ಸುಮಧುರ ಸಂಜೆ



ದೆಹಲಿ ಕರ್ನಾಟಕ ಸಂಘದ ವತಿಯಿಂದ ದೆಹಲಿಯ ಕನ್ನಡದ ಕಲಾವಿದರಿಂದ ಕನ್ನಡ ಚಲನ ಚಿತ್ರಗೀತೆಗಳ ಸುಮಧುರ ಸಂಜೆ ಕಾರ್ಯಕ್ರಮವು 5ನೇ ಸೆಪ್ಟೆಂಬರ್ 2015ರಂದು ಜರುಗಿತು.

ಈ ಕಾರ್ಯಕ್ರಮದಲ್ಲಿ ಶ್ರೀ ಅಶೋಕ್ ಕುಂಬಾರ್, ಡಾ. ಗಾಯತ್ರಿ, ಶ್ರೀ ಎ.ಟಿ. ಶ್ರೀನಿವಾಸ, ಶ್ರೀಮತಿ ಶೃತಿ ಗುರ್‌ಗಾಂವ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀ ವಿನೋದ್ ಕುಮಾರ್, ಶ್ರೀಮತಿ ಸವಿತಾ ನೆಲ್ಲಿ, ಕು. ಭಾಗ್ಯಶ್ರೀ, ಕು. ಜಯಶ್ರೀ, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಮಮತಾ ಶಿವರಾಮ್, ಶ್ರೀ ಚಿದಂಬರ ಕೋಟೆ, ಶ್ರೀಮತಿ ನೇತ್ರಾವತಿ, ಶ್ರೀ ಎಸ್. ಕುಮಾರ್, ಶ್ರೀಮತಿ ಶೈಲಾ ಕುಮಾರ್, ಕು. ಪ್ರೇರಣಾ, ಶ್ರೀ ಎಸ್. ಗಿರೀಶ್, ಶ್ರೀಮತಿ ಪೂಜಾ ಪಿ. ರಾವ್, ಶ್ರೀ ಆರ್. ಮಹಾದೇವ್, ಶ್ರೀಮತಿ ವಿದ್ಯಾ ಭಟ್, ಶ್ರೀಮತಿ ಮಂಜುಳಾ ನಾಗರಾಜ್, ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ ಮುಂತಾದ ಗಾಯಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಅವರು ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠ, ಆರ್.ಕೆ. ಪುರಂ ಸಹಯೋಗದೊಂದಿಗೆ ಸೂರ್ಯ ಕಲಾವಿದರು, ಬೆಂಗಳೂರು, ಪ್ರಸ್ತುತಪಡಿಸಿದ ಗೀತ ನಾಟಕ 'ಭೀಮ ವಿಜಯ' ವಿಕ್ರಮ್ ಸೂರಿ, ನಮಿತಾ ರಾವ್, ಶ್ರೀಹರಿ ಸುಪ್ರಸಿದ್ಧ ಸಿನಿಮಾ ಮತ್ತು ಕಿರುತೆರೆ  ಕಲಾವಿದರಿಂದ ಪ್ರದರ್ಶನಗೊಂಡಿತು.

ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರಿಗೆ ಅಭಿನಂದನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕದ ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರಿಗೆ ಸಂಘದ ಸ್ಮರಣಿಕೆ, ಹೂಗುಚ್ಛ ಹಾಗೂ ಶಾಲು ಹೊದಿಸಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಪಿ.ಸಿ. ಶ್ರೀನಿವಾಸ ಅವರು ಶಿಕ್ಷಕರನ್ನು ಸಂಘಕ್ಕೆ ಕರೆತರುವ ಜವಾಬ್ದಾರಿಯನ್ನು ವಹಿಸಿದ್ದರು ಮತ್ತು ಕಾರ್ಯಕ್ರಮವನ್ನು ನಿರೂಪಿಸಿದರು. ಅ

*ಅಭಿಮತ ವರದಿ*






























ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರೊಂದಿಗೆ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು





ಸೂರ್ಯ ಕಲಾವಿದರು, ಬೆಂಗಳೂರು,
ಪ್ರಸ್ತುತಪಡಿಸಿದ ಗೀತ ನಾಟಕ 'ಭೀಮ ವಿಜಯ'







# ಅನುಭವ ಸಾಗರದಲ್ಲಿ ಮುಳುಗಿ ಈಜುತ್ತಾ... ಬೆಡ್ ಕಾಫಿ

ನನ್ನ ಕಿಶೋರಾವಸ್ಥೆ. ನನ್ನ ಪೂಜ್ಯ ತಂದೆಯವರು ಸರ್ಕಾರಿ ಮಾಧ್ಯಮಿಕ ಶಾಲಾ ಮಾಸ್ತರರು. ಸಣ್ಣ ಸಣ್ಣ ಹಳ್ಳಿ-ಊರುಗಳಲ್ಲಿ ಶಿವನಿ, ಮೂಡುಗೆರೆ, ಚಿಕ್ಕಮಗಳೂರು, ಬಾಳೆಹೊನ್ನೂರು, ಕೊಪ್ಪ, ಕಳಸ, ಕಡೂರು, ಬೀರೂರು, ತರೀಕೆರೆ, ಕಡಬ, ತುಮಕೂರು, ಹಾಸನ ಹೀಗೆ ಅನೇಕ ಕಡೆ ಕೆಲಸ ಮಾಡಿ ಹಾಸನದಲ್ಲಿ ನಿವೃತ್ತಿ ಹೊಂದಿದವರು!

ನಮ್ಮ ತಾಯಿಯವರು ಹೊಳೆನರಸೀಪುರದಲ್ಲಿ ಹುಟ್ಟಿ ಆಗಿನ ಲೋವರ್ ಸೆಕೆಂಡರಿವರೆಗೆ ಓದಿ 12 ವರುಷಕ್ಕೆ ಮದುವೆ ಆಗಿ ಮುಂದೆ ಜೀವನ ನಡೆಸಿಕೊಂಡು ಬಂದವರು. ನಮ್ಮ ತಾಯಿಯ ಅಣ್ಣ-ತಮ್ಮಂದಿರು ತಮ್ಮ ತೌರೂರಾದ ಹೊಳೇನರಸೀಪುರಕ್ಕೆ ವರುಷಕ್ಕೊಂದು ಬಾರಿ ಅವರೆಲ್ಲಾ ದೊಡ್ಡ ದೊಡ್ಡ ಊರುಗಳಲ್ಲಿ ಕೆಲಸ ಮಾಡುತ್ತಾ ಓದುತ್ತಾ ಇದ್ದ ಬೊಂಬಾಯಿ, ಕಲ್ಕತ್ತ, ಬೆಂಗಳೂರು, ಹೈದರಾಬಾದ್ ಇತ್ಯಾದಿ ಜಾಗಗಳಿಂದ ಬರುತ್ತಿದ್ದರು. ಆಗ ಅವರು ನಮ್ಮನ್ನೆಲ್ಲಾ ನೋಡುವ ಸಲುವಾಗಿ ನಾವಿದ್ದ ಊರುಗಳಿಗೂ ಭೇಟಿಕೊಡುತ್ತಿದ್ದರು. ನಮಗೆಲ್ಲಾ ಅವರು ಬಂದರೆ ಬಹಳ ಕುತೂಹಲ, ಅವರ ಇರುಸರಿಕೆ, ಮಾತುಕತೆಯೆಲ್ಲಾ ಬಹಳ ಮೋಜು! ನಮ್ಮ ತಾಯಿ-ತಂದೆ-ಸಹೋದರ, ಮಾವಂದಿರು ಎಲ್ಲರೂ ಅವರಿದ್ದ ಪಟ್ಟಣ-ನಗರಗಳ ಸೋಜಿಗವಾದ ವಿಷಯಗಳು, ಜೀವನ ಶೈಲಿ, ಈ ಎಲ್ಲದರ ಬಗ್ಗೆ ಸಂತೋಷವಾಗಿ ಮಾತನಾಡುತ್ತಾ-ಕಷ್ಟಸುಖ ವಿಚಾರಿಸುತ್ತಾ ಇಸ್ಪೀಟ್, ಪಗಡೆ, ಗೌಕಾ (ಚೌಕಾಬಾರ) ಎಲ್ಲಾ ಆಟ ಆಡುತ್ತಾ ಸಂತೋಷವಾಗಿ ಕಾಲ ಕಳೆಯುತ್ತಿದ್ದರು. ಒಂದು ಬಾರಿ ಆಗ ನನಗೆ ಬೆಡ್‌ಕಾಫಿ ಎಂಬ ಶಬ್ದ ಒಮ್ಮೆ ಕಿವಿಗೆ ಬಿದ್ದು ನನ್ನ ಕುತೂಹಲ ಕೆರಳಿ ಬಿಟ್ಟಿತ್ತು.

ಹಾಗೆಂದರೇನೆಂದು ತಿಳಿಯಲು-ಪ್ರಯೋಗ ಮಾಡಲು ನಾನು ಹಿರಿಯ ಮಗಳಾಗಿದ್ದರೂ ನನಗೆ ಆಗಲೇ ಇಲ್ಲ. ಆಗಿನ ದಿನಗಳಲ್ಲಿ ನಮ್ಮ ಮನೆಯಲ್ಲಿ ಕಾಫಿ ಮಾತ್ರ ಕೇವಲ ನಮ್ಮಪ್ಪ ಅಮ್ಮನಿಗೆ, ನಮ್ಮಜ್ಜಿಗೆ, ಬಂದು ಹೋಗುವ ನೆಂಟರಿಷ್ಟರಿಗೆ ಮಾತ್ರ ಮೀಸಲು!. ನಾವು ಮಕ್ಕಳು ಆರೋಗ್ಯ ದೃಷ್ಟಿಯಿಂದ ರಾಗಿ ಹಿಟ್ಟಿನ ಗಂಜಿ (ಮನೆಯಲ್ಲೇ ತಯಾರಿಸಿದ ರಾಗಿ-ಮಾಲ್ಟ್) ಬೆಳಗ್ಗೆ ಕುಡಿಯುತ್ತಿದ್ದೆವು. ನನ್ನ ತಂದೆಯ ತಾಯಿ-ನನ್ನ ಪ್ರೀತಿಯ ಅಜ್ಜಿ (15ನೇ ವರುಷಕ್ಕೆ ವಿಧವೆಯಾಗಿ, ಮಡಿ ಹೆಂಗಸು-ಕೆಂಪು ಸೀರೆಯ ಅಜ್ಜಿಯಾಗಿದ್ದರು-ನನ್ನ ತಂದೆ ಹುಟ್ಟುವ ಮುಂಚೆಯೇ ನನ್ನ ತಾತ ತೀರಿಕೊಂಡರಂತೆ). ನನ್ನಜ್ಜಿ ಆಗಿನ ಕಾಲದ ಮಡಿ ಹೆಂಗಸು ನನ್ನಣ್ಣನ ಮನೆಯಲ್ಲಿ ಆಶ್ರಯ ಪಡೆದು ಬಹಳ ಕಟ್ಟುನಿಟ್ಟಿನ ಮಡಿ ಹೆಂಗಸಿನ ಜೀವನ 55 ವರುಷ ನಡೆಸಿದ್ದರು.

ಅರೆ ನಾನು ಬೆಡ್‌ಕಾಫಿ ಬಗ್ಗೆ ಹೇಳುತ್ತಿದ್ದೆನಲ್ಲದೇ ನಮ್ಮಜ್ಜಿ ಬೆಳಗಿನ ಜಾವಕ್ಕೆ ಎದ್ದು ಕೆರೆ-ಬಾವಿ-ನೀರು ಸೇದಿ ಸ್ನಾನ ಮಾಡಿ ನಡುಗುತ್ತಾ ಮಡಿ ಬಟ್ಟೆ ಉಟ್ಟು ಕಟ್ಟುನಿಟ್ಟಾಗಿ ದೇವರು ದಿಂಡರು-ಅಡಿಗೆ ಮನೆ ಎಂದು ಕೆಲಸಕ್ಕೆ ಶುರು ಮಾಡುತ್ತಿದ್ದರು. ಅವರೇ ಬೆಳಗಿನ ಕಾಫಿ-ಗಂಜಿ ಕಾಯಿಸಿ ಎರಡು ಡಬರಿಗಳಿಗೆ ಹಾಕಿ ಹಜಾರದಲ್ಲಿ ಹಿತ್ತಾಳೆ ಕಪ್ಪು-ಲೋಟಗಳೊಡನೆ ತಂದಿಟ್ಟು ನಮ್ಮಮ್ಮನಿಗೆ “ಬಿಸಿಬಿಸಿಯಾಗಿ ಕುಡಿಯಿರಿ” ಎಂದು ಹೇಳಿ ತನ್ನ ಪಟ್ಟ ಕಟ್ಟಿದ್ದ ರಾಜ್ಯವಾದ ಅಡಿಗೆ ಮನೆಗೆ ಸೇರಿ ಬಿಡುತ್ತಿದ್ದರು. ಅವರು ಯಾರೆದುರಿಗೂ



ಜಾಸ್ತಿ ಎದುರು ಬದರು ಕುಳಿತು ಮಾತಾಡಿ-ಕಾಲಕಳೆಯುತ್ತಿರಲಿಲ್ಲ. ಅಡಿಗೆ ಮನೆ ಹೊಸಿಲಿನ ಹತ್ತಿರ ಕೂತು ಹೂಬಿತ್ತಿ ಹೊಸೆಯುತ್ತಾ, ಹಾಡು, ರಂಗೋಲಿ, ತತ್ವಪದಗಳು, ಪೂಜಾ ಮಂತ್ರಗಳು, ಬೇರುನಾರುಗಳಿಂದ ನಾಟಿ ಔಷಧಿ ಮಾಡುತ್ತಾ ಅತ್ಯಂತ ರುಚಿಕರವಾಗಿ ಒಪ್ಪವಾಗಿ ಅಡಿಗೆ ಮಾಡುತ್ತಾ ದಿನ ಕಳೆಯುತ್ತಿದ್ದರು. ಅವರು ಒಪ್ಪತ್ತು ಊಟ ಮಾಡುತ್ತಿದ್ದರು. ಆದರೆ ಅವರ ವಿಶೇಷವಾದ ಗುಣವೆಂದರೆ ಒಂದು ಕಂಚಿ ಚೊಂಬು ಕಾಫಿಯೊಡನೆ ಸೌದೆ ಒಲೆ ಬೆಂಕಿ ಬಿಸಿಬೂದಿಕೆಂಡದಲ್ಲಿ ಸದಾ ಹದವಾದ ಶಾಖದೊಡನೆ ಊರಿಟ್ಟಿರುತ್ತಿದ್ದರು. ತನಗೆ ಹಸಿವಾದಾಗಲೆಲ್ಲ ಒಂದು ಗುಟುಕು ಕುಡಿಯುತ್ತಿದ್ದರು. ಒಳ್ಳೇ ಬೆಲ್ಲದ-ಚಿಕ್ಕಮಗಳೂರ ಕಾಫಿ! ಅವರ ಕಾಫಿ ಚಟ ತನ್ನ ಹೊಟ್ಟೆ ಹಸಿವನ್ನು ನಿಯಂತ್ರಿಸುವ ಸಾಧನವಾಗಿತ್ತು.

ಅಯ್ಯೋ ನಾನು ಬೆಡ್‌ಕಾಫಿ ಬಗ್ಗೆ ಹೇಳುತ್ತಿದ್ದೆನಲ್ಲವೇ... ಒಂದು ಬೆಳಗ್ಗೆ ನಿತ್ಯದಂತೆ ಕಾಫಿ ಮತ್ತು ಗಂಜಿಯ-ಎರಡೂ ಡಬರಿಗಳು ಹಬೆ ಹೊರಡಿಸುತ್ತಾ ಹಾಜರಾದವು. ನನಗೆ 9ವರುಷ ನನ್ನ ಕನಿಷ್ಠ ತಮ್ಮನಿಗೆ 9ತಿಂಗಳು. ತೊಟ್ಟಿಲನ್ನು ಹಜಾರದಲ್ಲೇ ಕಟ್ಟಿತ್ತು. ನಾವೆಲ್ಲಾ ಅದರ ಸುತ್ತಮುತ್ತ ಕುಳಿತು ಬೆಳಗಿನ ವಿಧಿವತ್ತಾದ ಕಾಫಿ ಗಂಜಿ ಸೆಸ್ಸನ್ ಮಾಡುವ ಪದ್ಧತಿ. ನಮ್ಮಮ್ಮ ಇನ್ನೇನು ಕಾಫಿ ಲೋಟಕ್ಕೆ ಹಾಕಬೇಕು. ಅನ್ನುವಷ್ಟರಲ್ಲಿ ಕಾಫಿ ಡಬರಿ ತುಂಬಿ ತುಳುಕಲು ಶುರುವಾಯಿತು. ನಮ್ಮಮ್ಮ ಇದೇನು ಅಕ್ಷಯ ಪಾತ್ರೆಯೋಃ ಅನ್ನಪೂರ್ಣೆ ಅನುಗ್ರಹಿಸಿದ್ದಾಳೆಯೇ ಎಂದು ಆಶ್ಚರ್ಯದಿಂದ ಸ್ತಬ್ಧಳಾಗಿ ಎಲ್ಲರ ಮುಖ ನೋಡಲು ಶುರು ಮಾಡಿದರು. ಆಕಡೆ ಈಕಡೆ ನೋಡುತ್ತಾ ಏನಪ್ಪಾ ಈ ಪವಾಡ ಎಂದು ನೋಡಿದರೆ ನನ್ನ ಚಿಕ್ಕ ತಮ್ಮ ತೊಟ್ಟಿಲಲ್ಲಿ ಮಲಗಿ ಆಟವಾಡುತ್ತಾ ಇದ್ದವನು ಬಿಸಿ ಉಚ್ಚೆಯ ಚಿಲುಮೆ ಶುರು ಮಾಡಿದ್ದಾನೆ. ಆ ಉಚ್ಚೆ ಸೀದ ಕಾಫಿ ಬದಿಗೆ ಬೀಳುತ್ತಿದೆ! ವಿಜ್ಞಾನ ವಿಸ್ಮಯ... ಇದಕ್ಕಿಂತ ಮೋಜುಂಟಾ!

ಅರೆ ನಾನು ಬೆಡ್-ಕಾಫಿ ಬಗ್ಗೆ ಹೇಳುತ್ತಿದ್ದೇನಲ್ಲವೇ... ನನಗೆ ತಾಯಿಯ ಮನೇಲಿ ಬೆಡ್‌ಕಾಫಿ ಮೇಲೆ ಪ್ರಯೋಗ ಮಾಡಲು ಅವಕಾಶ-ಸನ್ನಿವೇಶ ಎರಡೂ ಕೂಡಿ ಬರಲೇ ಇಲ್ಲ. ನಾನು ಹದಿನೆಂಟುವರೆ ವರುಷಕ್ಕೆ ಮದುವೆಯಾಗಿ ಅತ್ತೆ ಮಾವನ ಮನೆಗೆ ವಾರಾಣಾಸಿ-ಕಾಶಿ-ಬನಾರಸ್‌ಗೆ ಬಂದೆ-1958ನೇ ಇಸವಿ. ನಮ್ಮತ್ತೆ ಮತ್ತು ಮಾವನವರ ವಂಶಸ್ಥರು 130-150 ವರುಷಗಳಿಂದ ಕಾಶಿಯಲ್ಲೇ ವಾಸವಾಗಿದ್ದರು. ಮೂಲತಃ ತುರುವೇಕೆರೆ ಮತ್ತು ತುಮಕೂರು ದೀಕ್ಷಕರ ಕುಟುಂಬ. ವೇಷಭೂಷಣ, ಪೂಜೆ ಪುನಸ್ಕಾರ, ಊಟ ಉಪಚಾರ ಮನೇಲಿ ನಡೆ ನುಡಿ ನಡವಳಿಕೆ ಎಲ್ಲಾ ಕರ್ನಾಟಕದಂತೆ-ಅದರೊಡನೆ ಉತ್ತರ ಪ್ರದೇಶದ ರೀತಿ ನೀತಿಗಳಿಗೂ, ಸಂಸ್ಕೃತ ಭಾಷೆ ಮತ್ತು ಸಂಗೀತಕ್ಕೆ ಬಹಳ ಪ್ರಾಧಾನ್ಯತೆ! ಹೀಗೆ ಬಹಳ ವಿದ್ವನ್ಮಣಿಗಳ ಸಂಪರ್ಕದಿಂದ ಬಾಳಿ ಬದುಕಿದವರು.

ನನ್ನ ಮಾವನವರಿಗೆ ಕಾಫಿ ಮೇಲೆ ದ್ವೇಷ-ವೈರತ್ವ, ಆದರೆ ನಮ್ಮತ್ತೆ ಕಾಶಿಯಲ್ಲೇ ಹುಟ್ಟಿದರೂ 10-12 ವರುಷಗಳವರೆಗೆ ಬೆಳದಿದ್ದು ತುಮಕೂರಿನಲ್ಲಿ ನಂತರ ವಾರಾಣಾಸಿಯಲ್ಲಿ ಜೀವನ ಅವರಿಗೆ ಕಾಫಿ ಎಂದರೆ ಸಂಜೀವನಿ. ಕರ್ನಾಟಕದಿಂದ ಒಳ್ಳೇ ಕಾಫಿ ಬೀಜ ತರಿಸಿಕೊಂಡು ಕೈಲಿ ತಿರುಗಿಸುವ ಲೋಹದ ಹುರಿಯುವ ಯಂತ್ರದಲ್ಲಿ ಹುರಿದು, ಇನ್ನೊಂದು ಪುಡಿ ಮಾಡುವ ಲೋಹದ ಯಂತ್ರದಲ್ಲಿ ತಾಜಾ ಪುಡಿ ಮಾಡಿಕೊಂಡು ಹಿತ್ತಾಳೆ ಸೋಸುವ ಫಿಲ್ಟರ್‌ಗೆ ಬಿಸಿ ನೀರು ಹಾಕಿ ಬಿಸಿಬಿಸಿ ಕಾಯಿಸಿದ ಹಸುವಿನ ಹಾಲು-ಸಕ್ಕರೆ ಕಾಫಿ ಡಿಕಾಕ್ಷನ್ ಎಲ್ಲಾ ನಂತರ ಹದವಾಗಿ ಬೆರಸಿಕೊಂಡು ಯಾರಿಗೂ ಕಾಣದಂತೆ ಕುಡಿಯುತ್ತಿದ್ದರು. ಆ ಚಟವನ್ನು ತನ್ನ ದೊಡ್ಡಮಗ (ನನ್ನ ಪತಿ ಚಿಂತಾಮಣಿ)ನಿಗೆ ಚಿಕ್ಕ ವಯಸ್ಸಿನಲ್ಲೇ ಧೇಂಡಿಯಾಗಿ ಹಾಲು ತುಪ್ಪ ಮೊಸರು ಕೊಡುವುದರ ಜೊತೆ ಮಗುವನ್ನು ಮುದ್ದು ಮಾಡುತ್ತಾ ಸಕ್ಕರೆ ಕಾಫಿಯ ರುಚಿ ಅಭ್ಯಾಸ ಮಾಡಿಸಿದ್ದರು. ಎಂತಹ ಮಮತೆ ತಾಯಿಯದು. ಇನ್ನುಳಿದವರು ನನ್ನ ಮಾವನವರು ಮತ್ತು ನನ್ನ ಮೈದುನ, ಮನೆಯಲ್ಲಿ-ದನ-ಕರು ಪಾಲಿಸುತ್ತಾ, ಆಗಲೇ ಕರೆದ ಹಾಲು ಕುಡಿಯುತ್ತಿದ್ದರು.

ನನ್ನ ಯಜಮಾನರ ಕಾಫಿ ಚಟ ಹೇಗಿತ್ತೆಂದರೆ ರಾತ್ರಿ ಕನಸಿನಲ್ಲಿ ಕಾಫಿ ಕಂಡರೆ ತಕ್ಷಣ ಎದ್ದು ಕಾಫಿ-ಕಾಫಿ ಎನ್ನುತ್ತಿದ್ದರು. ನಾನು ನನ್ನ 25ನೇ ವರುಷದ ವಯಸ್ಸಿನವರೆಗೂ ಕಾಫಿ ಕುಡಿದಿರಲಿಲ್ಲ. ಆದರೆ ನನ್ನ ಎರಡನೇ ಮಗ ಬನಾರಸ್ ಕಡು ಚಳಿಯಲ್ಲಿ ಬನಾರಸ್ ಸುಂದರ್‌ಲಾಲ್ ಹಾಸ್ಪಿಟಲ್‌ನಲ್ಲಿ ಹುಟ್ಟುವಾಗ, ಚಳಿಯಿಂದ ಹಲ್ಲು ಕಟಕಟ ಎನ್ನುತ್ತಾ, ನಾನು ಒದ್ದಾಡುತ್ತಿದ್ದಾಗ, ಡಾಕ್ಟರ್ “ನೀನು ಬಿಸಿಬಿಸಿಯಾಗಿ ಕಾಫಿಯನ್ನೋ ಚಹವನ್ನೋ ಕುಡಿ. ಹೆರಿಗೆಗೆ ಸಹಾಯವಾಗುತ್ತೆ ಎಂದಾಗ ನಾನು ಕಾಫಿ ಆರಿಸಿಕೊಂಡು ಕುಡಿದೆ. (ಯಾಕೆಂದರೆ ಮುಂದೆ ನಮ್ಮ ಯಜಮಾನರಿಗೆ ಕಾಫಿ ಮಾಡಿಕೊಡುವಾಗ ನಾನು ಅದನ್ನೇ ಕುಡಿಯಬಹುದು ಕೆಲಸ ಕಮ್ಮಿಯಾಗುತ್ತೆ ಎಂಬ ಮುಂದಾಲೋಚನೆ ಇಂದ)

ಆಗಿನಿಂದ ಇಂದಿನವರೆಗೂ ನನಗೂ ಒಂದು ಚಟವಾಗಿ ಬಿಟ್ಟಿದೆ. ಸ್ವಹಸ್ತದಿಂದ ತಯಾರಿಸಿದ ಕಾಫಿ ಕುಡಿಯುವ ಭಾಗ್ಯ-ಆನಂದ ಸ್ವರ್ಗಕ್ಕೆ ಮೂರೇ ಗೇಣಿದ್ದಂತೆ).

ಅಯ್ಯಪ್ಪಾ-ಎಲ್ಲಿಂದ ಎಲ್ಲಿಗೂ ಹೋಗಿ ಬಿಟ್ಟೆ. ಬೆಡ್‌ಕಾಫಿ ಬಗ್ಗೆ ಹೇಳುತ್ತಿದ್ದೆನಲ್ಲವೇ. ನಾವು ದೆಹಲಿಯಲ್ಲಿ 1969ನೇ ಇಸವಿಯಲ್ಲಿ ನಮ್ಮ ನಮ್ಮ ವಿದ್ಯಾಭ್ಯಾಸಕ್ಕೆ ತಕ್ಕ ಕೆಲಸ ಹುಡುಕಿಕೊಂಡು ಜೆ.ಎನ್.ಯು. ಮತ್ತು ಡಿ.ಯು. ನಲ್ಲಿ ಕೆಲಸ ಪಡೆದು ವಾಸವಾಗಲು ಪ್ರಾರಂಭಿಸಿದೆವು. ನಾನು ನಮ್ಮ ಆಗಾಗ್ಗೆ ಬರುತ್ತಿದ್ದ ನೆಂಟರಿಷ್ಟರು, ಅತ್ತೆ ಮಾವ, ಎರಡು ನಾಯಿ ಹೀಗೆ ದೊಡ್ಡ ಪರಿವಾರದೊಡನೆ ಕೆಲಸದ ಒತ್ತಡದೊಡನೆ,

ಬೆಡ್–ಕಾಫಿಯನ್ನು ಕುಡಿಯಲು, ಮನೆಯ ಒಡತಿಯಾದರೂ ಸಾಧ್ಯವೇ ಆಗಲಿಲ್ಲ.

ಇಷ್ಟಾದರೂ ನಾವು ಗಂಡ–ಹೆಂಡತಿಗೆ ಬೆಡ್‌ಕಾಫಿ ಕುಡಿಯಬೇಕೆಂಬ ತೀವ್ರ ಆಸೆ ಸದಾ ಕಾಡುತ್ತಿತ್ತು. ಕೆಲವು ಕಾಲ ಅಡಿಗೆಗೆ–ಕೆಲಸಕ್ಕೆ ಆಳುಗಳನ್ನಿಟ್ಟುಕೊಂಡಿದ್ದರೂ ಅವರುಗಳನ್ನು ನಾನೇ ಬೇಗ ಎದ್ದು ಬಂದು ಎಬ್ಬಿಸಬೇಕಾಗುತ್ತಿತ್ತು. ಹೇಳಿ ಮಾಡಿಸಿಕೊಳ್ಳುವುದಕ್ಕಿಂತ ಕೈಲಿಹರಿಯುವವರೆಗೂ ನಾವೇ ಮಾಡಿಕೊಳ್ಳೋದು ಸುಲಭ! ಇನ್ನೆಲ್ಲಿಯ ಬೆಡ್ ಕಾಫಿ...

ಆದರೂ ಎಂದಾದರೂ ಒಂದು ದಿನ ಆ ಸದವಕಾಶ ಸಿಗಬಹುದೆಂದು ಒಳ್ಳೊಳ್ಳೆ ಪಿಂಗಾಣಿ ಕಪ್–ಸಾಸರ್, ಕೆಟ್ಲಿ, ಹಾಲು, ಸಕ್ಕರೆ ಪಾತ್ರೆ, ಆಧುನಿಕ ಕಾಫಿ ಸೋಸುವ ಪಾತ್ರೆಗಳು ಎಲ್ಲಿ ಕಂಡರೂ ಹಿಡಿದುಕೊಂಡು ಬರುತ್ತಿದ್ದೆವು. ಆದರೆ ಅವುಗಳನ್ನು ಉಪಯೋಗಿಸುವ ಕಾಲ ಬರಲೇ ಇಲ್ಲ. ಆದರೆ ಒಂದು ಮನಮುಟ್ಟುವ ನೆನಪು ಮಾತ್ರ ನನ್ನನ್ನು ಕಾಡುತ್ತೆ. ನಾನು ತವರಿಗೆ ಹೋದಾಗ ನಮ್ಮ ತಂದೆಗೆ ನಾಲ್ಕು ಗಂಟೆಗೆ ಕಾಫಿ (ಬೆಳಗಿನ ಜಾವ) ಕಾಫಿ ಕುಡಿಯುವ ಅಭ್ಯಾಸ ಎಷ್ಟಾದರೂ ಮಲೆನಾಡಿನ ಚಿಕ್ಕಮಗಳೂರಿನವರು. ನನ್ನ ತಾಯಿಗೆ ಬೇಗ ನಸುಕಿನಲ್ಲಿ ಏಳಲು ಆಗುತ್ತಿರಲಿಲ್ಲ. ನಮ್ಮ ತಂದೆ ಎದ್ದು ಕಾಫಿ ಮಾಡಿ ನನ್ನನ್ನು ಅಹಲ್ಯ ಏಳಮ್ಮಾ ಬಿಸಿ ಬಿಸಿ ಕಾಫಿ ತಂದಿದ್ದೇನೆ–ಕುಡಿದು ಮಲಗಿ ಬಿಡು ಎಂದು ಬೆಡ್‌ಕಾಫಿ ಕೊಟ್ಟಿದ್ದರು. ತವರಿನ ತಂದೆಯ ಪ್ರೀತಿ!

ಮತ್ತೆ ನೋಡಿ ಬೆಡ್‌ಕಾಫಿ ಬಗ್ಗೆ ಹೇಳುತ್ತಿದ್ದೆ ಅಲ್ಲವೇ–ಮಧ್ಯೆ ಮಧ್ಯೆ ಏನೇನೋ ಜ್ಞಾಪಕ ಬಂದು ಬಿಡುತ್ತೆ ಎಲ್ಲೋ ಜ್ಞಾನ. ಬಂದು–ಒಂದೇ ದಿನ ಬೆಳಗಿನ ಜಾವ ಬಹಳ ಯೋಚಿಸಿ, ನಿರ್ಧರಿಸಿ ಬೆಡ್‌ಕಾಫಿ ತಯಾರಿ ಮಾಡಿ ಇನ್ನೇನು ಕುಡಿಯಬೇಕು. ಅಷ್ಟರಲ್ಲಿ ನಮ್ಮ ಮನೆಯ ನಾಯಿ ಕೆಟ್ಟದಾಗಿ ಬೊಗಳಲು ಶುರು ಮಾಡಿತು. ಏನಪ್ಪಾ ಇದು ಎಂದು ಹೆದರಿ ಓಡಿ ಹೋದರೆ ಅದು ಬೆಕ್ಕನ್ನು ಹಿಡಿಯುವ ಪ್ರಯತ್ನದಲ್ಲಿತ್ತು. ಅಬ್ಬಾ ಎಷ್ಟೇ ಆಸೆ ಇದ್ದರೂ ಕಾರ್ಯಗತವಾಗಲು ಪುಣ್ಯ ಮಾಡಿರಬೇಕು. ಎಷ್ಟು ಲಭ್ಯವೋ ಅಷ್ಟೇ ಪ್ರಾಪ್ತಿ. ನನ್ನ ಪತಿ ದೈವಾಧೀನವಾಗಿ 27 ವರುಷಗಳಾದವು. ಹಿರಿಯ ಮಗ ಹೋಗಿ ಒಂದು ವರುಷವಾಗಿ ಹೋಯಿತು. ನನ್ನಿಬ್ಬರು ಮಕ್ಕಳು ಸಂಸಾರ ವಿದೇಶದಲ್ಲಿದ್ದಾರೆ. ನನ್ನ ಎರಡನೆ ಮಗ ಕುಟುಂಬ ನನ್ನ ಜೊತೆ ಇದ್ದಾರೆ. ಆದರೆ ಅವರೆಲ್ಲರೂ "ಅಮ್ಮ ಮಾಡಿದಂತೆ ಕಾಫಿ ಯಾರೂ ಮಾಡೋಲ್ಲ" ಎಂದು ಜಾರಿಕೊಳ್ಳುತ್ತಾರೆ. ಅಂತೂ ಪ್ರೀತಿಯಿಂದ ಕಾಫಿ ಅವರಿಗೆ ಮಾಡಿಕೊಡುತ್ತೇನೆ.

ನಾನು ಈಗ ಐದೂವರೆ ಆರು ಗಂಟೆಗೆ ಬೆಳಗ್ಗೆ ಎದ್ದು ರುಚಿ ರುಚಿಯಾಗಿ ಸಕ್ಕರೆ ಇಲ್ಲದ ಕಾಫಿ ಮಾಡಿಕೊಂಡು ನನ್ನದೇ ಸ್ಪೆಶಲ್ ಕಪ್ಪಿನಲ್ಲಿ ಸುರಿದುಕೊಂಡು ಅಡಿಗೆ ಮನೆಯಿಂದ ನನ್ನ ಮಲಗುವ ಕೋಣೆಗೆ ತುಳುಕಿಸಿಕೊಂಡು ಬಂದು 90 ಡಿಗ್ರಿ ಸಿ ಕಾಫಿಯನ್ನು 0 ಡಿಗ್ರಿಗೆ ಬರುವವರೆಗೂ ಹನಿಹನಿಯಾಗಿ ಕುಡಿದು ತಣಿಯುತ್ತೇನೆ. ಇದೇ ನನ್ನ ಬೆಡ್‌ಕಾಫಿ.

ಹೇಳ್ತಾರೆ ನೋಡಿ ಗಾದೆ – ಪಕ್ಕದ ಮನೆಯವರು ಹರಕೆ ಹೊತ್ತರೆ ಮನೆಯವರು ನೇಣು ಹಾಕಿಕೊಂಡರಂತೆ.

ನವಿಲು ಗರಿಗೆದರಿ ನಲಿದರೆ ಕೆಂಬೂತಿ ಪುಕ್ಕ ಕೆರೆದುಕೊಂಡಿತಂತೆ. ಹಾಗೆ ಬೆಡ್‌ಕಾಫಿ ಶಬ್ದ ನನ್ನ 9ನೇ ವಯಸ್ಸಿಗೆ ಕಿವಿಗೆ ಬಿತ್ತು. ಇಲ್ಲಿವರೆಗೂ ಅದು ಒಂದು ವಿಸ್ಮಯ ಧ್ವಂಸ, ವಿಡಂಬನೆಗಳೊಡನೆಯೇ ನನ್ನೊಡನೆ ಇದೆ. ಅ

***ಡಾ. ಅಹಲ್ಯಾಚಿಂತಾಮಣಿ***

# ಸಂಘದಲ್ಲಿ ಗಣೇಶೋತ್ಸವ



ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿ ವರ್ಷದಂತೆ ಈ ಬಾರಿಯು 17, 18 ಮತ್ತು 19 ಸೆಪ್ಟೆಂಬರ್ 2015ರಂದು ಗಣೇಶ ಚತುರ್ಥಿಯ ಸಂದರ್ಭದಲ್ಲಿ ಸಾರ್ವಜನಿಕ ಶ್ರೀ ಗಣೇಶೋತ್ಸವದ ಸಾಂಸ್ಕೃತಿಕ ಉತ್ಸವವನ್ನು ಆಚರಿಸಲಾಯಿತು. ಗಣೇಶ ಮಂಟಪವನ್ನು ಕಲಾವಿದ ಸುಧೀರ್ ಫಡ್ನೀಸ್ ಅವರು ತಯಾರಿಸಿದರು. ಮೂರು ದಿನಗಳ ಉತ್ಸವದ ಜವಾಬ್ದಾರಿಯನ್ನು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ರಾಧಾಕೃಷ್ಣ ಅವರು ವಹಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅ

***ಅಭಿಮತ ವರದಿ***

# ರಾಧಾಕೃಷ್ಣ ರಾವ್ ಅವರ ಸಾಕ್ಷಚಿತ್ರಕ್ಕೆ ರಾಷ್ಟ್ರಪ್ರಶಸ್ತಿ




ರಾಧಾಕೃಷ್ಣ ಅವರು ನಿರ್ಮಿಸಿದ ಛಾಯಾಚಿತ್ರಗಳ ಸಾಕ್ಷ್ಯಚಿತ್ರ 'ರಾವಣ–ಮೇಕಿಂಗ್ ಆಫ್ ಎಫಿಜೀಸ್'ಗೆ 28ನೇ ರಾಷ್ಟ್ರಮಟ್ಟದ ಸಮಕಾಲೀನ ಕಲೆಯ ಪ್ರದರ್ಶನದಲ್ಲಿ ಪ್ರಶಸ್ತಿ ಲಭಿಸಿದೆ. ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ದಕ್ಷಿಣ ಕೇಂದ್ರ ವಲಯವು ನಾಗಪುರದಲ್ಲಿ ಆಯೋಜಿಸಿದ 2014–15ರ ಸಾಲಿನ ಸ್ಪರ್ಧೆಯಲ್ಲಿ ಈ ಪ್ರಶಸ್ತಿ ಲಭಿಸಿದೆ. ರಾಯಚೂರು ಜಿಲ್ಲೆಯ ಮಾನ್ವಿಯವರಾದ ರಾಧಾಕೃಷ್ಣ ರಾವ್ ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವೀಧರರು. ಪ್ರಸ್ತುತ ಇವರು ನವದೆಹಲಿಯ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದಲ್ಲಿ ಹಿರಿಯ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅ

***ಡಾ. ಅವನೀಂದ್ರನಾಥ್ ರಾವ್ ವೈ.***

# ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲ ಕೆ.ಟಿ. ಗಣೇಶ್ ಅವರಿಗೆ ವಿದಾಯ ಎರಡು ವರ್ಷಕ್ಕೆ ಮುಂದುವರಿದ ಸೇವೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ತಮ್ಮ ವೃತ್ತಿಯಿಂದ ನಿವೃತ್ತರಾದ ಸಂದರ್ಭದಲ್ಲಿ ಅವರಿಗೆ ಸಂಸ್ಥೆಯ ವತಿಯಿಂದ ಭಾವಪೂರ್ಣ ವಿದಾಯಕೂಟ ಸಮಾರಂಭವನ್ನು ಶಾಲೆಯ ಆವರಣದಲ್ಲಿ ಇತ್ತೀಚೆಗೆ ಸಂಭ್ರಮದಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಅವರು "ಶ್ರೀ ಕೆ.ಟಿ. ಗಣೇಶ್ ಅವರ ಪ್ರಾಮಾಣಿಕ ಹಾಗೂ ದಕ್ಷತೆಯ ಕಾರ್ಯವೈಖರಿ ದೆಹಲಿ ಕನ್ನಡ ಶಾಲೆಗೆ ಹೊಸ ದಿಕ್ಕನ್ನು ಪರಿಚಯಿಸಿತು. ಸದಾ ಕರ್ತವ್ಯಶೀಲರಾಗಿರುವ ಅವರ ವ್ಯಕ್ತಿತ್ವವೇ ಅಪೂರ್ವವಾದುದು. ಸರಳ, ಸಜ್ಜನಿಕೆಯ ಸಾಕಾರಮೂರ್ತಿಯಾದ ಅವರು ಅನೇಕ ಕನ್ನಡಿಗರಿಗೆ ವೃತ್ತಿಯನ್ನು ದೊರಕಿಸಿ ಕೊಟ್ಟ ಸಾಧನೆಯ ಛಲಗಾರ" ಎಂದರು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ. ಆರ್. ರಾಮಮೂರ್ತಿ, ಮೆನೇಜರ್ ಶ್ರೀಮತಿ ಆಶಾ ಕಾರ್ಯಪ್ಪ, ಕಾರ್ಯದರ್ಶಿಗಳಾದ ಶ್ರೀ ಸಿ.ಆರ್. ಶ್ರೀನಿವಾಸ್, ಆಡಳಿತ ಮಂಡಳಿಯ ಸದಸ್ಯರು, ನಿವೃತ್ತ ಶಿಕ್ಷಕರು, ನೆಚ್ಚಿನ ಹಳೇ ವಿದ್ಯಾರ್ಥಿಗಳು, ಪೋಷಕರು ಹಾಗೂ ಪ್ರಾಂಶುಪಾಲರ ಹಿತೈಷಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಪಾಂಶುಪಾಲರಿಗೆ ಶುಭ ಹಾರೈಸಿದರು.

ಪಿ ಆ್ಯಂಡ್ ಟಿ ಹಿರಿಯ ಮಾಧ್ಯಮಿಕ ಶಾಲೆಯ ನಿವೃತ್ತ ಪಾಂಶುಪಾಲರಾದ ಶ್ರೀಮತಿ ಪ್ರವೀಣ್ ಶರ್ಮ, ವಿದ್ಯಾಭವನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಅಶೋಕ್ ಕುಮಾರ್, ಕೇರಳ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಹರಿ ಕುಮಾರ್, ಏರ್‌ಫೋರ್ಸ್ ಹಿರಿಯ ಮಾಧ್ಯಮಿಕ ಶಾಲೆಯ ಉಪಪ್ರಾಂಶುಪಾಲರಾದ ಶ್ರೀಮತಿ ಕವಿತಾ ಮೆನನ್, ಆಂಧ್ರ ಹಿರಿಯ ಮಾಧ್ಯಮಿಕ ಶಾಲೆಯ ಅಧ್ಯಕ್ಷರಾದ ಶ್ರೀ ಭೀಮಣ್ಣ ಇವರೆಲ್ಲರೂ ಪ್ರಾಂಶುಪಾಲರ ಬಗ್ಗೆ ಶುಭಾಸಂಸನೆಯನ್ನು ನುಡಿದು ಸ್ಮರಣಿಕೆ ನೀಡಿ ಗೌರವಿಸಿದರು.

ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸಂಸ್ಥೆಯ ಹಲವಾರು ಶಿಕ್ಷಕರು ಪ್ರಾಂಶುಪಾಲರ ಸೇವಾವಧಿಯ ಅನುಭವದ ಕ್ಷಣಗಳನ್ನು ಸವಿಯಾಗಿ ಹಂಚಿಕೊಂಡರು. ಜೊತೆಗೆ ಪ್ರಾಂಶುಪಾಲರ ಕುರಿತಾಗಿ ಸುಶ್ರಾವ್ಯ ಹಾಡುಗಳನ್ನು ಪ್ರಸ್ತುತಪಡಿಸಲಾಯಿತು.

"ಕಷ್ಟದ ಜೀವನವೇ ಶಿಸ್ತನ್ನು ಕಲಿಸುವ ನಿಜವಾದ ಶಾಲೆ." ಇಂತಹ ಶಿಸ್ತನ್ನು, ಪರಿಶ್ರಮವನ್ನು ಮೈಗೂಡಿಸಿಕೊಂಡಂತಹ ಶ್ರೀ ಕೆ.ಟಿ. ಗಣೇಶ್ ಅವರು ಕೆ.ಎಸ್. ತಿಮ್ಮಯ್ಯ ಹಾಗೂ ಕೆ.ಟಿ. ಅಕ್ಕಮ್ಮ ಅವರ ಪುತ್ರನಾಗಿ ಕೊಡಗು ಜಿಲ್ಲೆಯ ಒಂಟಿಯಂಗಡಿ ಎಂಬಲ್ಲಿ ಜನಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಪಠ್ಯ-ಪಠ್ಯೇತರ ಚಟುವಟಿಕೆಗಳಲ್ಲಿ ಪ್ರತಿಭಾವಂತರಾದ ಅವರು 1983ರ ಆಗಸ್ಟ್ ತಿಂಗಳಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸೇವೆಗೆ ಸೇರಿದರು. ಸುಮಾರು 32 ವರ್ಷಗಳ ಈ ದೀರ್ಘ ಪ್ರಯಾಣದಲ್ಲಿ ಹಲವಾರು ಸಂಘರ್ಷಗಳನ್ನು ಎದುರಿಸಿದ ಇವರು ಕನ್ನಡಕ್ಕಾಗಿ, ಕನ್ನಡ ಸಂಸ್ಥೆಗಾಗಿ ಅವಿರತವಾಗಿ ಸೇವೆ ಸಲ್ಲಿಸಿದ ನೇರನುಡಿಯ ಸಹೃದಯಿ. ಪ್ರಸ್ತುತ ನೋಯ್ಡಾದಲ್ಲಿ ತಮ್ಮ ಪತ್ನಿ ಶ್ರೀಮತಿ ನೀರು ಗಣೇಶ್ ಹಾಗೂ ಮಕ್ಕಳಾದ ರಕ್ಷಿತ, ದೀಪ್ತಿಕಾ ಜೊತೆ ಸುಖ ಸಂಸಾರವನ್ನು ನಡೆಸುತ್ತಿರುವ ಇವರ ಮುಂದಿನ ಜೀವನವು ಸುಖ-ಸಂತೃಪ್ತದಾಯಕವಾಗಿರಲಿ ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹಾಗೂ ಅವರ ಅಭಿಮಾನಿಗಳು ಶುಭ ಹಾರೈಸಿದರು.

ಹಿಂದಿನಿಂದಲೇ ಸಂಸ್ಥೆಯ ಎಲ್ಲಾ ಶಿಕ್ಷಕರೊಂದಿಗೆ, ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿರುವ ಪ್ರಾಂಶುಪಾಲರು ತಮ್ಮ ಸಹೋದ್ಯೋಗಿಗಳಿಗೆ ಸದಾ ಮಾರ್ಗದರ್ಶನ ನೀಡುತ್ತಾ ಹಲವಾರು ಕನ್ನಡಿಗರಿಗೆ ಸಹಾಯಹಸ್ತ ಚಾಚಿದ ವಿಶಿಷ್ಟ ಕನ್ನಡಿಗ. ಸಂಸ್ಥೆಗೆ ಒಂದು ಶಿಸ್ತನ್ನು ರೂಪಿಸಿದ ರೂವಾರಿಯಾದ ಇವರ ಸೇವಾವಧಿಯಲ್ಲಿ ಸಂಸ್ಥೆಯು ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದು ವಲಯ ಮಟ್ಟದಲ್ಲಿ ಸಂಸ್ಥೆಯು ಕೀರ್ತಿ ಪಡೆದಿದೆ. ಜೊತೆಗೆ ವಿವಿಧ ಕನ್ನಡಪರ ಹಾಗೂ ಕನ್ನಡೇತರ ಕಾರ್ಯಕ್ರಮಗಳು ನಡೆದಿವೆ. ಸಮಾರಂಭದಲ್ಲಿ ಪ್ರಾಂಶುಪಾಲರಿಗೆ ಶಿಕ್ಷಕ-ಶಿಕ್ಷಕೇತರ ವೃಂದದವರ ವತಿಯಿಂದ ಪುಷ್ಪಗುಚ್ಛ, ಹೂವಿನ ಹಾರದ ಜೊತೆ ಸ್ಮರಣಿಕೆ ನೀಡಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.




ಶ್ರೀ ಕೆ.ಟಿ. ಗಣೇಶ್ ಅವರ ಕರ್ತವ್ಯ, ಸೇವಾನಿಷ್ಠೆಯನ್ನು ಪರಿಗಣಿಸಿದ ಆಡಳಿತ ಮಂಡಳಿಯು ಮತ್ತು ಶಿಕ್ಷಣ ಇಲಾಖೆಯು ಮುಂದಿನ ಎರಡು ವರ್ಷಗಳ ಅವಧಿಗೆ ನಿಯಾಮನುಸಾರವಾಗಿ ಸೇವೆಯನ್ನು ಮುಂದುವರಿಸುವಂತೆ ನಿರ್ಧರಿಸಿತು ಎನ್ನುವುದು ದೆಹಲಿಯ ಕನ್ನಡಿಗರಿಗೆ, ವಿದ್ಯಾರ್ಥಿಗಳಿಗೆ, ಹೆತ್ತವರಿಗೆ ಹಾಗೂ ಸಂಸ್ಥೆಯ ಶಿಕ್ಷಕರಿಗೆ ಸಂತಸದ ಸಂಗತಿಯಾಯಿತು. ಅ

*ಅರವಿಂದ ಬಿಜ್ಜೆ*

## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಗಣೇಶ ಪೂಜೆ



ದಿನಾಂಕ 23.09.2015ರಂದು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ನಲ್ಲಿ ಗಣೇಶ ಪೂಜೆ ಏರ್ಪಡಿಸಲಾಗಿತ್ತು. ಸದಸ್ಯೆಯರೆಲ್ಲರೂ ಭಜನೆ, ಶ್ಲೋಕ ಹಾಡಿದರು. ತಮ್ಮ ಮನೆಯಿಂದ ಸ್ವಾದಿಷ್ಟವಾಗಿ ತಯಾರಿಸಿ ತಂದಿದ್ದ ಪ್ರಸಾದದೊಂದಿಗೆ ಗಣೇಶ ಪೂಜೆಯನ್ನು ಆಚರಿಸಿದರು. ಹಿರಿಯ ಸದಸ್ಯೆ ಅಹಲ್ಯ ಚಿಂತಾಮಣಿ ಯವರು ಗಣೇಶ ವಿವಾಹದ ಕತೆಯನ್ನು ಸ್ವಾರಸ್ಯವಾಗಿ ಹೇಳಿದರು. ಅ

*ದೀನಾ ಜಾಯ್ಸ್*

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಸಾಂಸ್ಕೃತಿಕ ಉತ್ಸವ



ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಇದೇ ಸಪ್ಟಂಬರ್ 6ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿತ್ತು. ಜಾನಪದ ಮೆರವಣಿಗೆಯ ಮೂಲಕ ಉತ್ಸವವನ್ನು ಶ್ರೀ ಎಚ್. ವಿಶ್ವನಾಥ್, ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಶನಲ್‌ನ ಅಧ್ಯಕ್ಷರು ಹಾಗೂ ಮಾಜಿ ಸಂಸದರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾದ ಪಾಲುಕೇರಮ್ಮ ದೇವಸ್ಥಾನದ ಅರ್ಚಕರು ಶ್ರೀ ನಾಗರಾಜ ಸ್ವಾಮೀಜಿಗಳು, ಶ್ರೀ ಮಹಾದೇವ್ ಜಂಕಾರ್, ಎಂ.ಎಲ್.ಸಿ., ಶ್ರೀ ಎಸ್.ಪಿ. ಸಿಂಗ್ ಬಗೇಲ್, ಶ್ರೀ ರಾಮರೆಡ್ಡಿ, ಶ್ರೀ ವೀರಸ್ವಾಮಿ ರೆಡ್ಡಿ, ಮಾಜಿ ಮೇಯರ್ ಶ್ರೀ ವೆಂಕಟೇಶ್ ಮೂರ್ತಿ, ಶ್ರೀ ಮಲ್ಲೇಶಂ, ಶ್ರೀ ಜೀತ್‌ರಾಮ್ ಪಾಲ್, ಶ್ರೀ ರಾಮ್‌ಪಾಲ್ ವೋಲ್ಕರ್, ಶ್ರೀ ಸುರೇಶ್ ಪಾಲ್ ಅವರುಗಳು ಪಾಲ್ಗೊಂಡಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರನ್ನು ಕನ್ನಡೇತರರಿಗೆ ಪರಿಚಯಿಸುವ ಕೆಲಸವಾಗಿದ್ದು ದೆಹಲಿ, ರಾಜಸ್ಥಾನ, ಹರಿಯಾಣ, ಉತ್ತರಪ್ರದೇಶ, ಪಂಜಾಬ್, ಛತ್ತೀಸ್‌ಗಡ, ಮಹಾರಾಷ್ಟ್ರ ರಾಜ್ಯದಿಂದ ಸುಮಾರು 1000ಕ್ಕೂ ಹೆಚ್ಚು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀ ಎಚ್. ಎಂ. ರೇವಣ್ಣ ಅವರು ಉದ್ಘಾಟಿಸಿದರು, ದಿನವಿಡೀ ಕಾರ್ಯಕ್ರಮಗಳು ಜರುಗಿದವು. ಈ ಕಾರ್ಯಕ್ರಮದಲ್ಲಿ ಕೇಂದ್ರ ಬಿಂದು ಸಂಗೊಳ್ಳಿ ರಾಯಣ್ಣರ ವಿಚಾರ ಸಂಕಿರಣ ನಡೆಯಿತು. ಡಾ. ಪುರುಷೋತ್ತಮ ಬಿಳಿಮಲೆ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರು, ಡಾ. ಮುನಿರಾಜು ಅವರುಗಳು ವಿಷಯ ಮಂಡಿಸಿದರು. ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಎಚ್. ವಿಶ್ವನಾಥ್ ಅವರು ವಹಿಸಿದ್ದರು.

ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಿಗೆ ವಿದ್ವಾನ್ ಕೋಲಾರ ರಮೇಶ್ ಅವರ ತಂಡದಿಂದ ಸಂಗೊಳ್ಳಿ ರಾಯಣ್ಣರ ಜೀವನ ಚರಿತ್ರೆಯ ನೃತ್ಯರೂಪಕ ಬ್ಯಾಲೆ, ಅರುಣಾ ತಂಡದಿಂದ ಜಾನಪದ ನೃತ್ಯ, ಮಂಜುನಾಥ್ ಮತ್ತು ತಂಡದಿಂದ ತಮಟೆವಾದನ, ವೆಂಕಟೇಶ್ ಮತ್ತು ತಂಡದಿಂದ ಪೂಜಾಕುಣಿತ, ನಿರಂಜನ ಮೂರ್ತಿ ಮತ್ತು ತಂಡದಿಂದ ವೀರಗಾಸೆ, ಸಾಗರ ತಂಡದಿಂದ ಜಾನಪದ ನೃತ್ಯ ವೈಭವ ಮತ್ತು ಪರಿಣಿತಿ ಕಲಾ ಕೇಂದ್ರದಿಂದ ಸಮೂಹ ನೃತ್ಯ ಮೂಡಿ ಬಂತು.

ಜೊತೆಗೆ ದೆಹಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮಗಳು ಅದ್ದೂರಿಯಾಗಿ ಮೂಡಿಬಂತು. ಹೊಂಗಿರಣ, ಕಾವೇರಿ, ಶಿವಪ್ಪ ಮತ್ತು ತಂಡ, ತಾರಾ ರಮೇಶ್ ಮತ್ತು ತಂಡದಿಂದ ನೃತ್ಯರೂಪಕಗಳು, ರಂಗೋಲಿ ತಂಡದಿಂದ ಮುಂಜಾನೆದ್ದು ಕುಂಬಾರಣ್ಣ ನೃತ್ಯರೂಪಕ, ಮತ್ತು ಮಾಸ್ಟರ್ ಲಿಖಿತ್‌ನಿಂದ ನೃತ್ಯ, ಎಸ್. ಕುಮಾರ್ ತಂಡದಿಂದ ತತ್ವಪದಗಳು ಜರುಗಿದವು.

ಈ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಶನಲ್‌ನ ಸುಮಾರು 300ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. ಇದೇ ಕಾರ್ಯಕ್ರಮದಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಿದ ಗಣ್ಯರಿಗೆ ಕ್ರಾಂತಿರತ್ನ ಸಂಗೊಳ್ಳಿ ರಾಯಣ್ಣ ಪುರಸ್ಕಾರವನ್ನು ಡಿ.ಸಿ.ಪಿ. ಶ್ರೀ ಬಿ.ಎಲ್. ಸುರೇಶ್, ಶ್ರೀ ಆನಂದ ಅಪ್ಪುಗೋಳ್, ಖ್ಯಾತ ಚಲನಚಿತ್ರ ನಿರ್ಮಾಪಕರು, ಶ್ರೀ ಎಚ್.ಡಿ. ರಾಜೇಶ್, ಶ್ರೀ ವೀರಸ್ವಾಮಿ ರೆಡ್ಡಿ, ಶ್ರೀ ಕಲಾರತ್ನ ರಾಮರೆಡ್ಡಿ, ಶ್ರೀ ಪ್ರಭುದೇವ್, ಮಾಜಿ ಅಧ್ಯಕ್ಷರು, ಕ್ಯಾಲಿಫೋರ್ನಿಯಾ ಅಮೇರಿಕ, ಮಾಲುರು ವಿ.ಜಿ., ರಂಗಭೂಮಿ ಕಲಾವಿದರು ಹಾಗೂ ಪತ್ರಕರ್ತರು, ವೇಣುಗೋಪಾಲ್ ಎಸ್., ಶ್ರೀ ಅಶ್ವತ್ಥ್ ರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ಕೋಲಾರ, ಶ್ರೀಮತಿ ಮಂಜುಳಾ ವೆಂಕಟೇಶ್, ಶ್ರೀ ನಾಗೇಂದ್ರ ಮಾಗಡಿ, ಹ್ಯಾಟ್ರಿಕ್ ನಿರ್ದೇಶಕರು ಮತ್ತು ಡಾ. ಪ್ರಭುಲಿಂಗದೇವರು ಅವರಿಗೆ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದ ಆಯೋಜನೆಯನ್ನು ಶ್ರೀ ರಾಜಣ್ಣ, ಆಹಿಂದ ಅಧ್ಯಕ್ಷರು, ಕೋಲಾರ ಮತ್ತು ಕಾರ್ಯಕ್ರಮದ ಸಂಚಾಲಕರು ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ, ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಸಹಕಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಬಳಗ, ನವದೆಹಲಿ ಮತ್ತು ಪ್ರಧಾನ ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಆಯೋಜಿಸಿತ್ತು.

ಈ ಕಾರ್ಯಕ್ರಮ ಮೂಡಿ ಬರಬೇಕಾದರೆ ಮುಖ್ಯವಾಗಿ ಕಾರಣಕರ್ತರಾಗಳಿಗೆ ಶ್ರೀ ಎಚ್.ಎಂ. ರೇವಣ್ಣ ಹಾಗೂ ಶ್ರೀ ಎಚ್. ವಿಶ್ವನಾಥ್, ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಶನಲ್‌ನ ಅಧ್ಯಕ್ಷರು, ಇವರನ್ನು ಅಭಿನಂದಿಸಲಾಯಿತು. ಅ

*ಸಿ.ಎಂ. ನಾಗರಾಜ*





ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 26 ಸಂಚಿಕೆ 1
ಅಕ್ಟೋಬರ್ 2015

## ಸಂಪಾದಕೀಯ

# ಒಮ್ಮತದ ಆಯ್ಕೆ ಏಕಾಗಬಾರದು

ಅಭಿಮತದ ಮತ್ತೊಂದು ಹೆಜ್ಜೆಯ ರೂಪದಲ್ಲಿ ಈ ಇಪ್ಪತ್ತಾರನೇ ಸಂಪುಟದ ಮೊದಲ ಸಂಚಿಕೆ ನಿಮ್ಮ ಮುಂದಿದೆ. ಅಭಿಮತದ ಸುದೀರ್ಘ ಪಯಣದಲ್ಲಿ ಇದೊಂದು ಮಹತ್ತರ ಹೆಜ್ಜೆ.

ದೇಶದ ರಾಜಧಾನಿಯಲ್ಲಿರುವ ದೆಹಲಿ ಕರ್ನಾಟಕ ಸಂಘವು ತನ್ನ ಸುಮಾರು ಆರು ದಶಕಗಳಿಗಿಂತಲೂ ಹೆಚ್ಚಿನ ಅಸ್ತಿತ್ವದಲ್ಲಿ ಹಲವಾರು ಮಹತ್ವದ ಕೊಡುಗೆಗಳನ್ನು ನೀಡಿ ಕರ್ನಾಟಕದ ಸಂಸ್ಕೃತಿ ಮತ್ತು ಭಾಷೆಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಉಳಿಸಿ ಬೆಳೆಸುವ ಕೆಲಸಗಳನ್ನು ಮಾಡಿದೆ. ವಿವಿಧ ಕಾಲಗಳಲ್ಲಿ ಅದರದೇ ಆದ ತೊಡಕುಗಳನ್ನು ಎದುರಿಸಿ ಮತ್ತು ಅವುಗಳನ್ನು ನಿವಾರಿಸಿ ಸಂಘವು ತನ್ನ ಮೂಲೋದ್ದೇಶಗಳಿಗೆ ಸರಿಯಾಗಿ ಕಾರ್ಯ ನಿರ್ವಹಿಸುವಂತೆ ಎಚ್ಚರದಿಂದ ಸಂಘವನ್ನು ಮುನ್ನಡೆಸಿದ ದೆಹಲಿಯ ಕನ್ನಡಿಗರ ಒಂದು ಅಪೂರ್ವ ಪರಂಪರೆಯೇ ಇದೆ. ಕರ್ನಾಟಕದಿಂದ ಬಹಳ ದೂರವಿರುವ ದೆಹಲಿಗೆ ತಮ್ಮ ವೃತ್ತಿಗಾಗಿ ಬಂದ ಕನ್ನಡಿಗರು, ತಮ್ಮ ನಿತ್ಯದ ಜಂಜಾಟಗಳ ನಡುವೆಯೂ ಕರ್ನಾಟಕದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಲು ದೆಹಲಿ ಕರ್ನಾಟಕ ಸಂಘವು ಒಂದು ವೇದಿಕೆಯಾಗಿ ಸಹಕಾರಿಯಾಗಿದೆ. ನವದೆಹಲಿಯ ಪ್ರತಿಷ್ಠಿತ ಬಡಾವಣೆಯಲ್ಲಿ ತನ್ನದೇ ಆದ ಸುಸಜ್ಜಿತ ಸಾಂಸ್ಕೃತಿಕ ಸಮುಚ್ಚಯವನ್ನು ಹೊಂದಿರುವ ಸಂಘವು ದೆಹಲಿಯ ಕ್ರಿಯಾಶೀಲ ಕನ್ನಡಿಗರಿಗೆ ಎಷ್ಟು ಉಪಯೋಗವಾಗುತ್ತಿದೆ ಎನ್ನುವುದು ಮುಖ್ಯ.

ದೆಹಲಿ ಕರ್ನಾಟಕ ಸಂಘದ ಆಡಳಿತವು ತನ್ನ ಸದಸ್ಯರಿಂದ ಆಯ್ಕೆಯಾದ ಒಂದು ಉತ್ತಮ ತಂಡದಿಂದ ಆಗಬೇಕು ಎಂಬುದು ಎಲ್ಲ ಸದಸ್ಯರ ಆಶಯ. ಅದಕ್ಕಾಗಿಯೇ, ಸಂಘದ ಅಂದಿನ ಆಡಳಿತ ಮಂಡಳಿಯ ದೂರದೃಷ್ಟಿಯ ದ್ಯೋತಕವಾಗಿ, ಸಂಘದ ನಿಯಮಾವಳಿಗಳನ್ನು 2013ರಲ್ಲಿ ತಿದ್ದುಪಡಿ ಮಾಡಲಾಯಿತು. ಆ ಮೂಲಕ, ಸಂಘದ ಆಡಳಿತವು ಯಾವುದೇ ದುಶಕ್ತಿಗಳ ಕೈಗೆ ಹೋಗಲಾರದು ಎಂಬ ಕಾಯಿದೆಯ ಕವಚವನ್ನು ತೊಡಿಸಲಾಯಿತು. ಪ್ರಜಾತಾಂತ್ರಿಕ ವ್ಯವಸ್ಥೆಗಳು ಸಂಘದ ಆಡಳಿತ ಮತ್ತು ಸರ್ವ ಸದಸ್ಯರಲ್ಲಿ ಇರುವುದರಿಂದ ಇಂದು ಸಂಘವು ಸಾರ್ವಜನಿಕ ಸಂಸ್ಥೆಯಾಗಿಯೇ ಉಳಿಯುವುದು. ಇಂತಹ ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ಮತ್ತು ವರ್ತಮಾನದಲ್ಲಿ ಸಂಘದ ಆಡಳಿತ ಮಂಡಳಿಯ ಆಯ್ಕೆಯ ಪ್ರಕ್ರಿಯೆಯು ಒಂದು ವಿಶಿಷ್ಟವಾದ ವಾತಾವರಣದಲ್ಲಿ ನಡೆಯುತ್ತಿದೆ. ಪ್ರಸ್ತುತ ಕಾಲದಲ್ಲಿ ಉತ್ತಮ ಆರ್ಥಿಕ ಸಾಮಾರ್ಥ್ಯವನ್ನು ಹೊಂದಿರುವ ಸಂಘವನ್ನು ಹೊರನಾಡ ಕನ್ನಡಿಗರ ಒಂದು ಮಾದರಿ ಸಂಸ್ಥೆಯಾಗಿ ಮಾಡಲು ಎರಡು ವಿಭಿನ್ನ ತಂಡಗಳು ಪೈಪೋಟಿ ನಡೆಸುತ್ತಿವೆ. ಇಂತಹ ಪೈಪೋಟಿಯಲ್ಲಿ ಸಂಘದ ಅಧಿಕ ಸದಸ್ಯರ ಬೆಂಬಲವಿರುವವರು ಸಂಘವನ್ನು ಮುನ್ನಡೆಸುತ್ತಾರೆ.

ಸಂಘದ ಚುನಾವಣೆಯಲ್ಲಿ ಸ್ಪರ್ಧಿಸುವವರನ್ನು ಸದಸ್ಯರು ಮತನೀಡಿ ಆರಿಸಿದರೂ, ಕೆಲವೊಮ್ಮೆ ಸಮರ್ಥ ನಾಯಕತ್ವ ಗುಣಗಳಿರುವ ವ್ಯಕ್ತಿಗಳು ಬೆರಳೆಣಿಕೆಯ ಮತಗಳಿಂದ ಸೋತು ಹೋಗುವುದರಿಂದ ಮುಂದೆ ಸಂಘದ ಆಡಳಿತದಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಾರೆ. ಇದರಿಂದಾಗಿ ದೇಶದ ರಾಜಧಾನಿಯಲ್ಲಿರುವ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸನ್ನು ಪಡೆದ ವ್ಯಕ್ತಿಗಳ ಸದುಪಯೋಗ ಸಂಘದ ಆಡಳಿತ ಮಂಡಳಿಗೆ ದೊರೆಯುವುದಿಲ್ಲ. ಪ್ರಜಾತಾಂತ್ರಿಕ ವ್ಯವಸ್ಥೆಗಳನ್ನು ನಾವು ಗೌರವಿಸಬೇಕಾದರೂ, ಕೆಲವೊಮ್ಮೆ ಸಂಘದಂತಹ ಸಂಸ್ಥೆಗಳಲ್ಲಿ ಒಮ್ಮತದ ಅಭಿಪ್ರಾಯಗಳನ್ನು ರೂಪಿಸಿ ಕೆಲವೊಂದು ಹುದ್ದೆಗಳನ್ನಾದರೂ ಅವಿರೋಧವಾಗಿ ಆಯ್ಕೆ ಮಾಡುವ ಪ್ರಬುದ್ಧತೆಯನ್ನು ಸಂಘದ ಸದಸ್ಯರು ಹೊಂದಬೇಕು. ಸಮರ್ಥರಾದವರು ಎಲ್ಲಿ ನಿಂತರೂ ಸದಸ್ಯರು ಅವರನ್ನು ಆಯ್ಕೆ ಮಾಡುತ್ತಾರೆ ಎಂಬ ಮಾತು ಕೆಲವೊಮ್ಮೆ ಸತ್ಯವೆನಿಸುವುದಿಲ್ಲ.

*ಬಾಲಕೃಷ್ಣ ನಾಯ್ಕ್ ಡಿ.*




# ಅಭಿಮತ : ಶುಭ ಗೀತ

ನಾಡು ನುಡಿಯ ಸೇವೆಗೆ ನಿಂತ–
ಶ್ರೇಷ್ಠ ಧ್ವನಿ ಅಭಿಮತ;

ಇಲ್ಲಿ ಕಲೆ, ಸಾಹಿತ್ಯ ಪ್ರಸಾರ ಅನವರತ–
ನೃತ್ಯ, ನಾಟಕ ಪರಿಪ್ಲುತ
ಜಾನಪದವೂ ಜೀವಂತ
ಯಕ್ಷಗಾನ ಪ್ರದರ್ಶನ ಸಂವರ್ಧಿತ !

ನಮ್ಮ ಭಾಷೆಯ ಧ್ವಜವಿಲ್ಲಿ ನಿತ್ಯ ರಾರಾಜಿತ
ಸಂಘಟನಾ ಮಂತ್ರ ಘೋಷಿತ,
ಭಾವೈಕ್ಯ ಸ್ವರೂಪ ಬಿಂಬಿತ;
ಸೃಜನಶೀಲ ಕಾರ್ಯವೂ ಸಂಪ್ರೇರಿತ
ಕನ್ನಡಿಗರ ಧ್ವನಿಯಲ್ಲಿ ಕ್ಷಣ ಕ್ಷಣವೂ ಪ್ರತಿಧ್ವನಿತ!

ಶಿಖರ ಪ್ರಾಯದಲ್ಲಿ ಜನಮತ... ನಿತ್ಯ ನಿರಂತರ ಆಹ್ಲಾದಿತ
ನಮ್ಮಂತರಂಗದ ಕನ್ನಡತನದ–ಅಭಿವ್ಯಕ್ತಿಯಲ್ಲಿ ಮುಕ್ತ... ಮುಕ್ತ;
ರಾಜಧಾಇಯಲ್ಲೂ ಕೂಡಾ... ಕನ್ನಡ ಕಹಳೆ ಉದ್ಘೋಷಿತ
ಹಿರಿಮೆ – ಗರಿಮೆ ಸಾಧಿತ... ಕನ್ನಡದ ನಲ್ಮೆ ಅಭಿಮತ!

ರಾಷ್ಟ್ರಮಟ್ಟದಿ ಅಭಿವಂದಿತ... ಉಘೇ ಉಘೇ... ಕನ್ನಡ ಗಾಥಾ
ಕ್ಷಣ ಕ್ಷಣವೂ ಅನುರಣಿತ... ಕನ್ನಡಿಗರ ಹೆಮ್ಮೆ ಇಲ್ಲಿ ದಾಖಲಿತ!

*ಡಾ. ದೊಡ್ಡರಂಗೇಗೌಡ*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೋಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Oct-2015, Vol. No.25, Issue No.10, Price Rs.1/- RNI Regn. No. 53405/91, DL-SW-1/4016/13-15
Printout Date : Oct 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

